ಬೃಹಚ್ಚರಣ

ಸಂಪಾದಕ ಸಮಿತಿ

ಎಸ್. ಸೋಮಸುಂದರ	ಪ್ರಧಾನ ಸಂಪಾದಕ
ವಿ. ಎಸ್. ಮಣಿ	ಕಾರ್ಯದರ್ಶಿ
ಕೆ.ಸಿ. ನಟರಾಜನ್	ಸಂಚಾಲಕರು
ಅಚಲ ರಮೇಶ್	ಸದಸ್ಯರು
ವೈ.ಜಿ. ಗಿರಿಶಾಸ್ತ್ರಿ	ಸದಸ್ಯರು
ಕೆ.ಎಸ್. ಮಧುಸೂದನ	ಗೌ॥ ಸಂಪಾದಕ

ಸಂಪುಟ : 3 ಸಂಚಿಕೆ : 3 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟೆಂಬರ್ 2013

ಪ್ರಾಚೀನ ಬೃಹಚ್ಚರಣ ಗ್ರಾಮ ಗುಮ್ಮಳಾಪುರದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರು

ಗುಮ್ಮಳಾಪುರದ ಪ್ರಸಿದ್ಧ ಗುಂಡುಗೌರಮ್ಮ ದೇವಿ

ಬೇವಿನ ಮರದ ಅಂಬಾ ಭವಾನಿ ದೇವಿ

ಶ್ರೀ ಶಂಕರ ಭಗವತ್‌ಪಾದರು

ಬೃಹಚ್ಚರಣ ಗ್ರಾಮಗಳಲ್ಲಿ ಕಾರ್ಯಕಾರಿಣಿ ಸಭೆಗಳು

ಕಿತ್ತಿಗಾನಹಳ್ಳಿ (7–7–2013)
ಪ್ರಾಯೋಜಕರು:
ಎಸ್. ಸತ್ಯನಾರಾಯಣ

ಬನ್ನೇರುಘಟ್ಟ (4–8–2013)
ಪ್ರಾಯೋಜಕರು:
ಟಿ.ಎಸ್. ರಮೇಶ್

ಗುಮ್ಮಳಾಪುರ (15–9–2013)
ಪ್ರಾಯೋಜಕರು:
ಕೆ.ಎಸ್. ಮಧುಸೂದನ

ಅರ್ಪಣೆ

ಶ್ರೀ ಎ.ವಿ. ಲಕ್ಷ್ಮಣ ಅಯ್ಯರ್

ಸಂಚಾಲಕೀಯ

ಬೃಹಚ್ಚರಣ ಬಾಂಧವರಿಗೆ ದಸರ ಹಾಗೂ ದೀಪಾವಳಿ ಶುಭಾಶಯಗಳು. ಸದಸ್ಯರಿಂದ ಪತ್ರಿಕೆಗೆ ಹೆಚ್ಚಿನ ಸಂಖ್ಯೆಯ ಲೇಖನಗಳು ಬರುತ್ತಿರುವುದು ಸಂತಸದ ಸಂಗತಿ. ನಮ್ಮ ಜನಾಂಗದ ಮಹಿಳೆಯರು ಸಾಮಾಜಿಕವಾಗಿ ಜಾಗೃತರಾಗಿರುವುದು ಇಲ್ಲಿನ ಲೇಖನಗಳಿಂದ ಬಿಂಬಿತವಾಗುತ್ತಿದೆ. ನಮ್ಮ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಲೇಖನಗಳನ್ನು ನೀಡಬೇಕಾಗಿ ಕಳಕಳಿಯ ಪ್ರಾರ್ಥನೆ. ಸಂಪಾದಕ ಸಮಿತಿ ಸದಸ್ಯೆ, ಉತ್ಸಾಹೀ ತರುಣಿ, ಅಚಲ ರಮೇಶ್ ಅವರ ಅಕಾಲಿಕ ಮರಣಕ್ಕೆ 'ಬೃಹಚ್ಚರಣ' ಸಂತಾಪಗಳು.

■ ಸಂ.

ಅಧ್ಯಕ್ಷರ ನುಡಿ

ಸಜ್ಜನ ಬಂಧುಗಳಿಗೆ ನಮಸ್ಕಾರ,

ಶ್ರಾವಣಮಾಸ ಬಂತೆಂದರೆ ಹಬ್ಬಗಳ ಸಾಲು. ತಮ್ಮ ಕುಲದೇವತೆ – ಇಷ್ಟದೇವತೆ ತಮಗೂ ಹಾಗೂ ತಮ್ಮ ಕುಟುಂಬದವರಿಗೆಲ್ಲಾ ಸುಖ, ಸಂತೋಷ ಹಾಗೂ ಸಮೃದ್ಧಿ ನೀಡಲೆಂದು ಸಂಘದ ಕಾರ್ಯಕಾರಿ ಸಮಿತಿ ಪರವಾಗಿ ಶುಭ ಹಾರೈಸುತ್ತೇನೆ.

ಗುರು ಪೂರ್ಣಿಮ ನಡೆದ ಸಂದರ್ಭದಲ್ಲಿ ನಮ್ಮ ಸಮುದಾಯದ ಎಲ್ಲ ಉಪಾಧ್ಯಾಯ ವೃತ್ತಿ ಬಾಂಧವರಿಗೆ ದೇವರು ನೆಮ್ಮದಿ, ಶಾಂತಿ ದಯಪಾಲಿಸಲೆಂದು ಕೋರುತ್ತಾ, ಎಲ್ಲ ವಿದ್ಯಾ ಗುರುಗಳಿಗೆ ಗೌರವದ ವಂದನೆಗಳು.

"ಬೃಹಚ್ಚರಣ" ಸಂಚಿಕೆಯ ಬಗ್ಗೆ ತಮ್ಮ ಮೆಚ್ಚುಗೆಗೆ ನಾವು ಆಭಾರಿ. ಉತ್ತಮ ಲೇಖನಗಳನ್ನು ಚಿಕ್ಕ, ಚೊಕ್ಕದಾಗಿ ಬರೆದು ಕಳುಹಿಸಿ.

ನಮ್ಮ ಸಮುದಾಯದ ದಂಪತಿಗಳಿಂದ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಭಾನುವಾರ 1–12–2013ರಂದು ನಾಗಕ್ಷೇತ್ರ ಕಿತ್ತಗಾನ ಹಳ್ಳಿಯಲ್ಲಿ ನೆರವೇರಿಸಲು ತೀರ್ಮಾನಿಸಿದೆ. ಅಂತೆಯೇ ಅಂದು 75 ವಸಂತಗಳು ತುಂಬಿದ ಹಿರಿಯ ಚೇತನಗಳಿಗೆ 'ಗೌರವಾರ್ಪಣೆ' ಮತ್ತು ಪ್ರತಿಭಾ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನು ಈ ಬಾರಿ ನಾಗಕ್ಷೇತ್ರದಲ್ಲೇ ನಡೆಸಲು ತೀರ್ಮಾನಿಸಿದೆ. ತಾವು ಕುಟುಂಬದೊಂದಿಗೆ ಆಗಮಿಸಲು ಆಹ್ವಾನಿಸುತ್ತೇನೆ.

ಬೃಹಚ್ಚರಣ ಹಿರಿಯ ಸದಸ್ಯರಾದ ಶ್ರೀಯುತ ವೆಂಕಟಸುಬ್ಬ ಐಯರ್, ಗುಮ್ಮಳಾಪುರದ ರಾಧಾಕೃಷ್ಣ, ಕಮಲನಾಭ ಹಾಗೂ ಡಿ.ವಿ. ನಟರಾಜ್ ನಮನ್ನಗಲಿದ್ದಾರೆ. ಅವರುಗಳಿಗೆ ಗೌರವ ನಮನ. ಹಿರಿಯ ಹಿತೈಷಿಗಳನ್ನು ಕಳೆದುಕೊಂಡಿರುವುದು ನಮ್ಮ ದೌರ್ಭಾಗ್ಯ. ಕು॥ ಅಚಲ ರಮೇಶ್ ಅವರ ಅಕಾಲಿಕ ಮರಣ ವಿಷಾದನೀಯ. ಅವರುಗಳ ಕುಟುಂಬಕ್ಕೆ ಶಾಂತಿ ಕೋರುತ್ತೇನೆ.

ಕಾರ್ಯಕಾರಿ ಸಮಿತಿ ಮಾಸಿಕ ಸಭೆಗಳನ್ನು, ನಮ್ಮ ಸದಸ್ಯರೇ ಬೆಂಗಳೂರಿನಿಂದ ಹೊರಗೆ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಸುತ್ತಿದ್ದು, ಪೂರ್ತಿ ಖರ್ಚು – ವೆಚ್ಚ ಭರಿಸುತ್ತಿದ್ದಾರೆ. ಅವರ ಸಹಕಾರಕ್ಕೆ ಧನ್ಯವಾದಗಳು.

ಮುಂದಿನ ದಿನಗಳಲ್ಲಿ ತಮ್ಮೆಲ್ಲರಿಗೂ ಒಳ್ಳೆಯದಾಗಲಿ, ಒಳ್ಳೆಯದೇ ಆಗುತ್ತದೆ.

ತಮ್ಮ ವಿಶ್ವಾಸಿ,

■ ಎಸ್. ಸೋಮಸುಂದರ

"ಹಿರಿಯ ಚೇತನ"ಗಳಿಗೆ ಗೌರವ ಹಾಗೂ ಪ್ರತಿಭಾನ್ವಿತ ಮಕ್ಕಳಿಗೆ "ಪುರಸ್ಕಾರ"

ಸದಸ್ಯರೇ,

ಪ್ರತಿ ವರ್ಷದಂತೆ ಈ ಬಾರಿಯೂ 75 ವರ್ಷ ತುಂಬಿದ ನಮ್ಮ "ಹಿರಿಯ ಚೇತನ"ಗಳಿಗೆ ಗೌರವ ಸಮರ್ಪಿಸುವ ಕಾರ್ಯಕ್ರಮ ಹಾಗೂ ಎಸ್.ಎಸ್.ಎಲ್.ಸಿ. ಮತ್ತು 2ನೇ ಪಿ.ಯು.ಸಿ. ಪರೀಕ್ಷೆಗಳಲ್ಲಿ 80%ಕ್ಕೂ ಹೆಚ್ಚು ಒಟ್ಟು ಅಂಕಗಳನ್ನು ಪಡೆದಿರುವ ನಮ್ಮ ಸಮುದಾಯದ ಪ್ರತಿಭಾನ್ವಿತ ಮಕ್ಕಳಿಗೆ "ಪುರಸ್ಕಾರ" ಮಾಡಲು ಕಾರ್ಯಕಾರಿ ಸಮಿತಿ ದಿನಾಂಕ: 1–12–2013 ಗೊತ್ತು ಪಡಿಸಿದ್ದು, ವಿವರಗಳನ್ನು ಈ ಕೂಡಲೇ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ನೀಡಲು ಕೋರಿದೆ.

ಅಧ್ಯಕ್ಷರು

ಸಹಸ್ರ ಚಂದ್ರದರ್ಶನದ ಹಿರಿಯರಿಗೆ ಅಭಿನಂದನೆಗಳು

ನಮ್ಮ ಸಂಘದ ಹಿರಿಯ ಸದಸ್ಯ ಶ್ರೀ **ವೆಂಕಟರಮಣ ಅಯ್ಯರ್,** ಇತ್ತೀಚೆಗೆ ತಮ್ಮ 80ನೇ ಹುಟ್ಟುಹಬ್ಬವನ್ನು ಬೆಂಗಳೂರು, ರಾಜಾಜಿನಗರದಲ್ಲಿ ಆಚರಿಸಿಕೊಂಡ ಈ ಸಂದರ್ಭದಲ್ಲಿ **ಬೃಹಚ್ಚರಣ** ಶುಭ ಹಾರೈಸುತ್ತದೆ.

ಸಂಘದ ಹಿರಿಯ ಸದಸ್ಯ ಶ್ರೀ **ಎಸ್. ಶ್ರೀನಿವಾಸನ್**ರವರು ತಮ್ಮ 80ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಈ ಶುಭ ಸಂದರ್ಭದಲ್ಲಿ ಶುಭ ಕೋರುತ್ತಾ ಹಿರಿಯರಿಗೆ ಶಾಂತಿ ನೆಮ್ಮದಿ ಆರೋಗ್ಯ ಮುಂದಿನ ದಿನಗಳಲ್ಲಿ ಇರಲೆಂದು ಹಾರೈಸುತ್ತದೆ.

ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು : **ಎಸ್. ಸೋಮಸುಂದರ, 9900113298**
ಉಪಾಧ್ಯಕ್ಷರು : **ಕೆ.ಬಿ. ಮುರಳಿ, 9448044164**
ಕೆ. ಮಂಜುನಾರಾಯಣ್, 9886114279
ಕಾರ್ಯದರ್ಶಿ : **ವಿ.ಎಸ್. ಮಣಿ, 9845055582**
ಸಹಕಾರ್ಯದರ್ಶಿ : **ವಿ. ಅರುಣ, 9880166001**
ಖಜಾಂಚಿ : **ಎಸ್. ಸತ್ಯನಾರಾಯಣ, 9980945699**
ಲೆಕ್ಕಪರಿಶೋಧಕರು : **ಎಚ್.ಕೆ. ಶಶಿಧರ್, 9845173766**

ಸದಸ್ಯರು : **ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್**

ಸಲಹೆ : **ಕೆ.ಎಸ್. ಮಧುಸೂದನ, 9902145359**

ಸದಸ್ಯರ ಗಮನಕ್ಕೆ

"ಬೃಹಚ್ಚರಣ Face Book" ಬೃಹಚ್ಚರಣ ಸಮುದಾಯದ ವಿಷಯಗಳು, ಚಿತ್ರಗಳು ಹಾಗೂ ಕಾರ್ಯಕ್ರಮಗಳನ್ನು ಫೇಸ್ ಬುಕ್ಕಿನಲ್ಲಿ "ಬೃಹಚ್ಚರಣ" ಎಂದು ಕ್ಲಿಕ್ಕಿಸಿ ನೋಡಬಹುದು.

ಶ್ರದ್ಧಾಂಜಲಿ

ಶ್ರೀ ಜಿ. ವೆಂಕಟಸುಬ್ಬ ಅಯ್ಯರ್, ಗುಮ್ಮಳಾಪುರ
ಶ್ರೀಮತಿ ಶಾರದ ರಾವ್
ಶ್ರೀಮತಿ ಲಕ್ಷ್ಮೀದೇವಿ ಶಾಸ್ತ್ರಿ, ಎಂ. ದಾನಪ್ಪನವರ ಮಗಳು
ಶ್ರೀ ಜಿ.ಎಂ. ಕಮಲನಾಭನ್, ಗುಮ್ಮಳಾಪುರ
ಶ್ರೀ ಜಿ.ಕೆ. ರಾಧಾಕೃಷ್ಣ, ಗುಮ್ಮಳಾಪುರ
ಶ್ರೀ ಹೆಚ್.ಡಿ. ಸುಬ್ರಮಣ್ಯ, ಹೆಚ್.ಡಿ. ಗಣೇಶರವರ ಸೋದರ
ಶ್ರೀ ಗಂಗಾಧರೇಶ್ವರ, ಅಲಸೂರುಪೇಟೆ ರಂಗಮ್ಮನವರ ಮಗ
ಶ್ರೀ ಡಿ.ವಿ. ನಟರಾಜ್, ಶ್ರೀ ಪ್ರಭಾಕರ್‌ರವರ ತಂದೆ
ಶ್ರೀಮತಿ ಶಾರದ ಲಕ್ಷ್ಮೀಪತಿ, ಡಾ॥ ಭಾನುಪ್ರಕಾಶರ ತಾಯಿ
ಶ್ರೀಮತಿ ಲಲಿತಮ್ಮ, ಟಿ.ವಿ. ಶ್ರೀಕಂಠ ಶರ್ಮರ ತಾಯಿ
ಕುಮಾರಿ ಅಚಲ ರಮೇಶ್, ಲಲಿತಾ –ರಮೇಶ್‌ರವರ ಪುತ್ರಿ

ತಿದ್ದುಪಡಿ

'ಬೃಹಚ್ಚರಣ' ಸಂಚಿಕೆ ಏಪ್ರಿಲ್, ಜೂನ್ 2013ರಲ್ಲಿ ನಮ್ಮನ್ನಗಲಿದ ನಮ್ಮವರಿಗೆ ಶ್ರದ್ಧಾಂಜಲಿ ಎಂಬ ಶೀರ್ಷಿಕೆಯಲ್ಲಿ ಶ್ರೀಮತಿ ಗೀತಾ ರಾಮ್ ಗೋಪಾಲ್ ಟಿ. ಎಂಬ ಹೆಸರಿಗೆ ಬದಲಾಗಿ ಶ್ರೀಮತಿ ಗೀತಾ ರಾಮಚಂದ್ರ ಎಂಬುದಾಗಿ ಮುದ್ರಿಸಿರುವುದಕ್ಕೆ ವಿಷಾದಿಸುತ್ತೇವೆ.

ಸಂಚಾಲಕ
ಬೃಹಚ್ಚರಣ

ಬೇವಿನ ಮರದ ಅಂಬಾ ಭವಾನಿ

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೋನಪಲ್ಲಿ ಮಂಡಲದ ಶ್ರೀನಿವಾಸಪುರ ಗ್ರಾಮದಲ್ಲಿ ಒಂದು ವಿಶಿಷ್ಟವಾದ ಚಿಕ್ಕ, ಚೊಕ್ಕ "ಗ್ರಾಮದೇವತಾ" ಪವಾಡ ಸದೃಶ ಅಂಬಾ ಭವಾನಿ ದೇವಸ್ಥಾನವಿದೆ. ಮೂಲ ದೇವತೆಯು ಶಿಲಾರೂಪದಲ್ಲಿದ್ದು, ಇದರೊಂದಿಗೆ 35 ವರ್ಷಗಳ ಹಿಂದೆ ದೇವಿಯ ಪಂಚಲೋಹ ವಿಗ್ರಹವನ್ನು ದಿವಂಗತ ಮುಂಗಾನಹಳ್ಳಿ ವೆಂಕಟೇಶಶಾಸ್ತ್ರಿ, ಪದ್ಮಾವತಮ್ಮ ದಂಪತಿಗಳು ಪ್ರತಿಷ್ಠಾಪಿಸಿದ್ದಾರೆ.

ಗ್ರಾಮದೇವತೆಯಾದ ಅಂಬಾ ಭವಾನಿ ಉತ್ಸವ ಮೂರ್ತಿಯು ಭಕ್ತರ ಕೋರಿಕೆಯಂತೆ ಚಿಂತಾಮಣಿ, ಬಾಗೇಪಲ್ಲಿ, ಶಿಡ್ಲಘಟ್ಟದ ಗ್ರಾಮಗ್ರಾಮಗಳಿಗೂ ತೆರಳಿ, ಭಕ್ತರ ಅಭೀಷ್ಟಗಳನ್ನು ನೆರವೇರಿಸುತ್ತದೆ. ವಿಶಿಷ್ಟವೆಂದರೆ ಗ್ರಾಮಗಳಿಗೆ ತೆರಳುವ ದೇವಿಯ ಎರಡು ಉತ್ಸವ ಮೂರ್ತಿಗಳಿದ್ದು, ಪ್ರತಿ ವಿಗ್ರಹವೂ ಬೇವಿನ ಮರದಿಂದ ಶಾಸ್ತ್ರೋಕ್ತವಾಗಿ ಕೆತ್ತಲ್ಪಟ್ಟಿದ್ದು, ಆಕರ್ಷಕ ಬಣ್ಣಗಳಿಂದ ಕೂಡಿದೆ.

ಅಂಬಾ ಭವಾನಿಯ ಔಪಾಸಕರೂ, ದೇವಸ್ಥಾನದ ಧರ್ಮದರ್ಶಿಗಳಾದ ಶ್ರೀ ಸುಂದರರಾಮಶಾಸ್ತ್ರಿ – ಶೇಷಮ್ಮ ದಂಪತಿ ಹಾಗೂ ಕುಟುಂಬದವರು ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಗಣಪತಿ, ಆಂಜನೇಯಸ್ವಾಮಿ ದೇವರುಗಳನ್ನು ಗ್ರಾಮಸ್ಥರ, ಹಾಗೂ ಭಕ್ತರ ನೆರವಿನೊಂದಿಗೆ ಪ್ರತಿಷ್ಠಾಪಿಸಿರುತ್ತಾರೆ. ಗ್ರಾಮದ ಹಿರಿಯ ಕೃಷಿಕ ದೇವಿಭಕ್ತ ಶ್ರೀ ವೆಂಕಟ ಸುಬ್ಬಾರೆಡ್ಡಿಯವರ ಉಸ್ತುವಾರಿಯಲ್ಲಿ ಪ್ರತಿ ಮಂಗಳವಾರ, ಶುಕ್ರವಾರದಂದು ವಿಶೇಷ ಪೂಜೆಗಳು ನೆರವೇರುತ್ತದೆ. ಶಿವರಾತ್ರಿಯ ದಿನ ವಿಶೇಷಪೂಜೆ, ಹೋಮ, ಧಾರ್ಮಿಕ ಚಟುವಟಿಕೆಗಳು ನಡೆಯಲಿದ್ದು, ಸಾವಿರಾರು ಭಕ್ತರು ಸೇರಿ ತಾಯಿ ಅಂಬಾ ಭವಾನಿಯ ಆಶೀರ್ವಾದವನ್ನು ಪಡೆಯುತ್ತಾರೆ. ಪೂಜಿಸಿದವರ ಮನೋಭೀಷ್ಟ ನೆರವೇರುತ್ತದೆ. *(ದೇವಿಯ ಚಿತ್ರ ಮುಖಪುಟದಲ್ಲಿದೆ)*

■ **ಮಮತಾ ಶಿವಕುಮಾರ್**

ಗುರುಭ್ಯೋನಮಃ

ಗುರುಪೌರ್ಣಿಮೆಯಂದು ಗುರುಗಳನ್ನು ನೆನೆಯುವುದು ಸಂಸ್ಕಾರದ ಪ್ರತೀಕ. ಇದು ನಮ್ಮ ಭಾರತೀಯ ಪರಂಪರೆಯ ಪದ್ಧತಿ. ಪ್ರತಿಯೊಬ್ಬ ಜೀವಿಗೂ ಜೀವನದಲ್ಲಿ ಒಂದು ಗುರಿ ಇದ್ದು, ಮುಂದೆ ಗುರಿ, ಹಿಂದೆ ಗುರು ಇದ್ದರೇನೇ ಆ ಜೀವಿಯ ಜೀವನವು ಸಾರ್ಥಕಗೊಳ್ಳಲು ಸಾಧ್ಯ.

ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ಬುದ್ಧ, ಬಸವಣ್ಣ, ದತ್ತಾತ್ರೇಯ, ವೇದವ್ಯಾಸ, ಗುರುರಾಘವೇಂದ್ರ, ರಾಮಕೃಷ್ಣ ಪರಮಹಂಸ ಮುಂತಾದ ಮಹಾನ್ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ಭಾರತೀಯ ಸಂಸ್ಕೃತಿಯು ಅಗಾಧವಾಗಿ ಹರಡಿ ಇಂದೂ ಉಳಿದಿದೆ. ಅನೇಕ ಜನರ ಆಧ್ಯಾತ್ಮಿಕ ಬೆಳವಣಿಗೆಗೆ ಇದು ಸಹಕಾರಿಯಾಗಿದೆ.

ಬೃಹಚ್ಚರಣ ಸಮುದಾಯದಲ್ಲೂ ವಿದ್ಯಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವವರನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕು. ಪ್ರಶಸ್ತಿಗಳನ್ನು ಹಿಂಬಾಲಿಸದೆ ತಮ್ಮ ಕರ್ತವ್ಯವಾದ ವಿದ್ಯಾದಾನವೇ ಪ್ರದಾನ ಎಂದು ತಿಳಿದ ಅನೇಕ ಮಹನೀಯರುಗಳು ನಮ್ಮಲ್ಲಿದ್ದಾರೆ. ನಮ್ಮ ಸಮಾಜದ ಎಲ್ಲಾ ಗುರುಗಳಿಗೆ ಬೃಹಚ್ಚರಣ ಸಮುದಾಯವು ಈ ಸಂದರ್ಭದಲ್ಲಿ 'ಗುರುನಮನ' ಅರ್ಪಿಸುತ್ತದೆ.

■ **ಎಸ್.ಸಿ. ಶ್ರೀನಿವಾಸ್**

ಸಾಹುಕಾರ್ ಲಕ್ಷ್ಮಣ ಅಯ್ಯರ್ : ಒಂದು ಸ್ಮರಣೆ

ಭದ್ರಾಶಯ....! ಓಹೋ ಅದೆಷ್ಟು ಸುಂದರ ನೆನಪು. ಬೆಂಗಳೂರು ನಗರದ ಕೇಂದ್ರ ಬಿಂದು ಗಾಂಧಿನಗರ. ಅಲ್ಲಿ ಪ್ರಸಿದ್ಧ ಪಂಚತಾರ ಹೋಟೆಲ್ ತಾಜ್‌ಮಹಲ್‌ನ ಹಿಂಬದಿಯಲ್ಲಿದ್ದ ಜೋಡಿ ಮನೆಗಳ ಹೆಸರೇ ಭದ್ರಾಶಯ. ಸುಭೇದಾರ್ ಛತ್ರಂ ರಸ್ತೆಯ ಅಡ್ಡರಸ್ತೆಯ ಮೂಲಕ ತಲುಪುವ ರಸ್ತೆ ಸಂಪರ್ಕವಿತ್ತು. ಈ ಜೋಡಿ ಮನೆಯೇ ಬೃಹಚ್ಚರಣದ ಕೌಂಡಿಣ್ಯಸ ಗೋತ್ರದವರದು. ಆಡೇಸಣ್ಣಹಟ್ಟಿಯ ವೆಂಕಟರಮಣಯ್ಯನವರ ಅವಳಿ ಪುತ್ರರಾದ ರಾಮಲಕ್ಷ್ಮಣರದು.

ಈ ಅವಳಿಗಳಿಗೆ ಸೂರಿ ಅರ್ಥಾತ್ ಸೂರ್ಯನಾರಾಯಣ ಐಯ್ಯರ್ ನಂತರ ಅವರ ಅನುಜ ಗಣೇಶ್ ಕೃಷ್ಣಐಯ್ಯರ್ ಜೋಡಿ. ಚಾಮರಾಜಪೇಟೆ 3ನೇ ರಸ್ತೆಯಲ್ಲಿ ವಾಸವಿದ್ದ ಪರಮಶಿವಯ್ಯ ಅವರ ತಂಗಿ ಗೌರಮ್ಮ, ಲಕ್ಷ್ಮಣಯ್ಯರ್‌ರವರ ಮನ ಮೆಚ್ಚಿದ ಮಡದಿ. ಅವಳಿಗಳಲ್ಲಿ ರಾಮಸ್ವಾಮಯ್ಯರವರು ಸಣ್ಣ ದೇಹದವರಾದರೆ, ಲಕ್ಷ್ಮಣರದು ತುಸು ದಢೂತಿ ದೇಹ. ರಾಮಸ್ವಾಮಿಯವರು ವಿದ್ಯಾ ಇಲಾಖೆಯಲ್ಲಿ ಅಧಿಕಾರಿಗಳಾಗಿ ನಿವೃತ್ತರು. ಲಕ್ಷ್ಮಣಯ್ಯರ್‌ರವರ ಪೂರ್ಣನಾಮ ಲಕ್ಷ್ಮಿನಾರಾಯಣ ಐಯ್ಯರ್ ಬೃಹಚ್ಚರಣದ ಹಿರಿಯರಿಗೆ ಲಕ್ಷ್ಮಣರಾದರೆ, ಕಿರಿಯರಿಗೆ ಲಕ್ಷ್ಮಣ ಮಾಮ. ವಿದ್ಯಾಭ್ಯಾಸ ಹೈಸ್ಕೂಲ್ ಮಟ್ಟದ್ದಾದರೂ ಪರಿಚರಣ, ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಚೆನ್ನಾಗಿ ಬಲ್ಲವರು ವ್ಯವಹಾರದಲ್ಲಿ ನಿಪುಣರು. ಇವರದ್ದು ನಾಲ್ವರು ಪುತ್ರರು ಮತ್ತು ಈರ್ವರು ಪುತ್ರಿಯರ ತುಂಬು ಸಂಸಾರ.

ಜೀವನಕ್ಕೆ ಇವರು ಆರಿಸಿಕೊಂಡಿದ್ದು ಮೊದಲು ದಂಡು ಪ್ರದೇಶದ ಬ್ರಿಗೇಡ್ ರಸ್ತೆಯಲ್ಲಿನ "Rex" ಸಿನಿಮಾ ಥಿಯೇಟರ್ ಇದರ ವ್ಯವಸ್ಥಾಪಕರಾಗಿ ಕೆಲಸ ಮಾಡಿದರು. ಈ ಚಿತ್ರಮಂದಿರದಲ್ಲಿ ಇಂಗ್ಲಿಷ್ ಚಿತ್ರಗಳು ಪ್ರದರ್ಶಿಸುತ್ತಿದ್ದ ಕಾಲವದು. ನಂತರ ಮಾರವಾಡಿಗಳ ಬಳಿ ಲೇವಾದೇವಿಯ ವ್ಯವಹಾರ ಇವರಿಗೆ ಕರಗತವಾಯಿತು. ಆಮೇಲೆ ಅವೆನ್ಯೂ ರಸ್ತೆಯಲ್ಲಿನ ಅಂಚೆಕಚೇರಿ ಪಕ್ಕದಲ್ಲಿನ ಕಪೂರ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ಸಂಸ್ಥೆ ಇವರ ವ್ಯವಹಾರ ಕೇಂದ್ರ. ವಾಹನಗಳೇ ವಿರಳವಾಗಿರುವ ಕಾಲದಲ್ಲಿ ಬುಲೆಟ್ ಬೈಕ್ ಇವರ ವಾಹನ. ಕಛೇರಿಯಲ್ಲಿ ಬಿಳಿಯ ಹಾಸಿಗೆಯಂತಹ ಮೆತ್ತೆಗಳ ಮೇಲೆ ಇವರ ದರ್ಬಾರ್. ಸುತ್ತಮುತ್ತಲ ಹಳ್ಳಿಗಳಿಂದ ಬರುವ ಬೃಹಚ್ಚರಣ ಬಂಧುಗಳಿಗೆ ಇವರ ಸ್ನೇಹ ಹಸ್ತ ಸದಾ ಚಾಚಿರುತ್ತಿತ್ತು.

ಲಕ್ಷ್ಮಣಯ್ಯರ್‌ರವರಿಗೂ ಕಿತ್ತಿಗಾನಹಳ್ಳಿಯವರಿಗೂ ಆಪ್ಯಾಯ ಮಾನವಾದ ನಂಟು. ಪ್ರತಿ ಶನಿವಾರ, ಭಾನುವಾರ ಬುಲೆಟ್ ಕಿತ್ತಿಗಾನಹಳ್ಳಿ ಸೇರುತ್ತಿತ್ತು. ಅಲ್ಲಿನ ಬಂಧುಗಳೊಂದಿಗೆ ಇಪ್ಪತ್ತೆಂಟಾಡುತ್ತ ಇಪ್ಪತ್ತೆಂಟ ನಾಡುವುದು ಪರಿಪಾಠವಾಗಿತ್ತು. ಉಭಯ ಕುಶೋಲೋಪರಿ ಸಹಾಯಹಸ್ತ ಎಂದೆಂದೂ ಇರುತ್ತಿತ್ತು. ನಾಗಾರಾಧನೆಯ ದಿನ ಅವೆನ್ಯೂ ರಸ್ತೆಯಲ್ಲಿನ ಮಿಠಾಯಿ ಅಂಗಡಿಯಿಂದ ಲಡ್ಡುಗಳನ್ನು ಬೈಕಿನ ಹಿಂದೆ ಕಟ್ಟಿ ತಂದು ಸಮಾರಾಧನೆಯಲ್ಲಿ ಭಕ್ತರಿಗೆ ವಿತರಿಸಿ, ಶ್ರೀನಿವಾಸನ ಸೇವೆ ಸಲ್ಲಿಸುತ್ತಿದ್ದರು.

ಶ್ರೀನಿವಾಸ ದೇಗುಲದ ನಿರ್ಮಾಣಕ್ಕೆ ಕಾರಣರಾದ ಲಾಯರ್ ವೆಂಕಟರಮಣಯ್ಯ ಮತ್ತು ಅಮ್ಮಣ್ಣಮ್ಮನವರು ಬೆಂಗಳೂರಿನ ನಗರ್ತಪೇಟೆಯಲ್ಲಿ ಬಡಬ್ರಾಹ್ಮಣ ಬಾಲಕರ ವಿದ್ಯಾಭ್ಯಾಸಕ್ಕೆ ಹಾಸ್ಟೆಲ್ ನಡೆಸುತ್ತಿದ್ದರು. ಅನೇಕ ಬಡ ಬಾಲಕರು ಇಲ್ಲಿದ್ದು ತಮ್ಮ ಬದುಕಿನ ನೆಲೆಯನ್ನು ಕಂಡುಕೊಂಡಿದ್ದಾರೆ. ಲಕ್ಷ್ಮಣಯ್ಯರ್ ಇದರ ಟ್ರಸ್ಟಿಯಾಗಿ ಸೇವೆ ಸಲ್ಲಿಸಿ ಕೃತಕೃತ್ಯರಾಗಿದ್ದಾರೆ. ಇವರ ಸಮಾಜಸೇವೆ ಸದಾ ನೆನಪಿನಂಗಳದಲ್ಲಿ ಸ್ಥಿರವಾಗಿರುತ್ತದೆ.

ಶ್ರೀಯುತರು ಬಂಧು ಮಿತ್ರರಿಗೆ ಅವಶ್ಯಕವಾದ ಆರ್ಥಿಕ ನೆರವು ನೀಡುತ್ತಿದ್ದರು. ಇದರಿಂದಾಗಿ ಇವರು ಎಲ್ಲರೊಳು ಒಂದಾಗಿ ಬಿಟ್ಟಿದ್ದರು. ಸಮಾಜಸೇವೆಯಲ್ಲಿ ತೊಡಗಿಸಿಕೊಂಡ ರೀತಿ ರಿವಾಜುಗಳು ಬಡವರ ಬಗ್ಗೆ ಇದ್ದ ಕಳವಳಿ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಅಂತೆಯೇ ಅವರು ಮರೆಯಲಾಗದವರು, ಚಿರಸ್ಮರಣೀಯರು.

■ **ಜಿ.ಎಸ್. ಸತ್ಯಮೂರ್ತಿ**

ಓದುಗರ ಪತ್ರಗಳು

ಮಾನ್ಯರೇ,

ಬೃಹಚ್ಚರಣ ತ್ರೈಮಾಸಿಕ ವಾರ್ತಾಪತ್ರಿಕೆಯು ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಹಿರಿಯರನ್ನು ಗೌರವಿಸುತ್ತ, ಮಕ್ಕಳನ್ನು ಪ್ರೋತ್ಸಾಹಿಸುತ್ತ, ಸ್ವಯಂ ಉದ್ಯಮಿಗಳನ್ನು ಪರಿಚಯಿಸುತ್ತಾ, ಕಲಾವಿದರ ಪ್ರತಿಭೆಗೆ ಅವಕಾಶ ನೀಡುತ್ತಾ ಎಲ್ಲರಿಗೂ ಪ್ರಿಯವಾಗುವಂತೆ ತ್ರೈಮಾಸಿಕ ವಾರ್ತಾ ಪತ್ರಿಕೆಯು ಬಹಳ ಚೆನ್ನಾಗಿ ಮೂಡಿಬರುತ್ತಿದೆ. ನಂಜನಗೂಡಿನ ವಿಚಾರ ಕೂಲಂಕಶವಾಗಿ ತಿಳಿಸಿ ಕೊಟ್ಟಿದ್ದೀರಿ. ಕವನ, ಹನಿಗವನ, ಚಿತ್ರ ಮುಂತಾದ ಪ್ರತಿಭೆಗೂ ಅವಕಾಶ ಕೊಟ್ಟಿದ್ದೀರಿ.

ಧನ್ಯವಾದಗಳು.

■ **ಎಸ್. ಇಂದಿರಾ ಪ್ರಕಾಶ್**

ನಮಸ್ಕಾರುಂಗು.

ಏಪ್ರಿಲ್–ಜೂನ್ ಪತ್ರಿಕೆ ವಂದದೆ. 2ನೇ ಪೇಜ್ಲೆ ಇರಕರ್ ಪೆರೀಲ್ವಾಳ್ದೆ ಪರಂದ್‌ನಾಳೀ ಫೋಟೋ, 6ನೇ ಪೇಜ್ಲೆ ಎನ್. ಕೃಷ್ಣಸ್ವಾಮಿ ವಳ್ದಿರ್ಕುರ್ ಕೋಡುಬಳೆ, 9ನೇ ಪೇಜಿ ಗ್ರೂಪ್‌ಫೋಟೋ ಶಾನೆ ಇಷ್ಟು ಆಚಿ. ಪೇಜ್ 11ಲೇ ಇರ್ಕರ್ ಭಾರತಿ ಕುಟುಂಬತೀ ಸವಿನುಡಿ ಅವಾಳ್ದೆ ಹಾತಿ ಹತ್ರೆ ಕೋಟೆ ವೀದೀಲೆ ಇರಕರಪ್ಪೊ ಸವಿನುಡಿ ಶ್ರೀನಿವಾಸ್ ಅವಾಳೆ ಪಾತಿರ್ಕುದ್ದು ಜ್ಞಾಪಕು ವಂತು. ಪೇಜ್ 12ಲೆ ಇರಕರ್ ದ್ವಿಭಾಷಿಕ ನಿಘಂಟು ನನ್ನೆ ಅದೆ. ಸವಿನುಡೀಲೆ ಇರ್ಕರ್ ಕೊಂಚು–ದಮಯಂತಿ–ಗೀತಾರಹಸ್ಯ ಮಹಿಮೆಗಳೆ ವಾರ್ತಾಪತ್ರುತ್ತೆ ಪೋಟ್ಕ ಅದು ಮುಖ್ಯಮಾನ ವಿಷ್ಯ ಆಗುದ್ದೆ. ಇತ್ತೆ ಪತ್ರಿಕೇಲೆ ಪೋಟ್ಕ ನಾ ಆಭಾರಿ.

■ **ಶ್ಯಾ.ನಂ. ಕೃಷ್ಣಮೂರ್ತಿ**

ಫ್ರೀಡಂ

ಒಂದು ಕೊಳ್ಳಿರಿ, ಒಂದು ಫ್ರೀಯಾಗಿ ಪಡೆಯಿರಿ. ಕಿರಿಚುತ್ತಿವೆ ಜಾಹೀರಾತುಗಳು. ಒಂದು ಕೊಂಡುಕೊಳ್ಳಲು ನಾನು ಎರಡು ಬಾರಿ ಯೋಚಿಸುತ್ತೇನೆ. ಆದರೂ ಸಹ ಈ ಹಳ್ಳಕ್ಕೆ ಬೀಳಲು ನಾನು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ!

ಪದಾರ್ಥ ಕೊಳ್ಳಿ, ಅದರ ಜೊತೆಗೆ ಹೊಳೆಯುವ (ಸ್ಟೀಲ್) ಎವರ್ ಸಿಲ್ವರ್ ಚಮಚ/ಆಕರ್ಷಕ ಬಣ್ಣದ ಪ್ಲಾಸ್ಟಿಕ್ ಡಬ್ಬಿ/ಅಂದವಾದ ಲೋಟ/ಪೆನ್ಸಿಲ್ ಅನ್ನು ಫ್ರೀ ಆಗಿ ಪಡೆಯಿರಿ. ಈ ಅಟ್ಯಾಚ್‌ಮೆಂಟ್‌ಗಳನ್ನು ದಿಟ್ಟಿಸಿ ನೋಡಿ ಮಾರು ಹೋದ ಹೋಂ ಮೇಕರ್ಸ್‌ಗಳ ಹೊಳೆಯುವ ಮುಖಾರವಿಂದಗಳನ್ನು ನಾವು ನೋಡುತ್ತಿರುತ್ತೀವಿ!

ಮುಕ್ಕಾಲು ಮೂರುಪಾಲು ಸಮಯಗಳಲ್ಲಿ ಈ ತರಹದ 'ಫ್ರೀ' ಅಟ್ಯಾಚ್‌ಮೆಂಟ್ಸ್ ಕೆಲವೊಂದು ಪದಾರ್ಥಗಳನ್ನು ಕೊಳ್ಳುವುದಕ್ಕೆ ಮೂಲ ಕಾರಣವಾಗಿರುತ್ತದೆ! ಹೀಗಾಗಿ ಕೊಂಡ ಪದಾರ್ಥಗಳು ಮೇಜಿನ ಮೇಲೆ ಧೂಳು ಕುಡಿಯುತ್ತಲೋ ಅಥವಾ ಕಪಾಟಿನಲ್ಲಿ ನಿದ್ರಿಸುತ್ತಲೋ ಇರುತ್ತವೆ!

ಒಮ್ಮೆ ನಾನೊಂದು ಸೂಪರ್ ಮಾರ್ಕೆಟ್‌ಗೆ ಹೋಗಿದ್ದಾಗ ಒಬ್ಬ ಹೆಂಗಸು ಒಂದು ಪ್ಯಾಕೆಟ್ ಅನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದುದನ್ನು ಕಂಡು ಪರವಾಗಿಲ್ಲ ಇದೊಂದು "ಎದ್ದೇಳಿ ಗ್ರಾಹಕರೇ ಎದ್ದೇಳಿ" ಕೇಸ್ ಇರಬಹುದೆಂದು ಖುಷಿ ಆಯಿತು. ಆದರೆ ಅವಲೋಕನದ ನಂತರ ಆಕೆ 'ಅಯ್ಯೋ ಇದರೊಂದಿಗೆ ಯಾವ ಫ್ರೀ ವಸ್ತುವೂ ಇಲ್ಲ' ಎಂದು ಗೊಣಗಿದಾಗ ನಿರಾಸೆಯಾಗಿತ್ತು.

ಕೊಂಡ ವಸ್ತುವಿನೊಡನೆ ನಮೂದಿಸಿದ್ದ 'ಫ್ರೀ' ವಸ್ತು ಯಾವುದಾದರೂ ಕಾರಣಕ್ಕಾಗಿ ಸಿಗದಿದ್ದ ಪಕ್ಷದಲ್ಲಿ 'ಹೋಂ ಮೇಕರ್ಸ್' ಅನ್ನು ಉಗ್ರಾವತಾರದಲ್ಲಿ ಕಾಣಬಹುದು!

ಈ 'ಫ್ರೀ' ಪರಿಕಲ್ಪನೆ ಬೆಳೆಯುತ್ತಿದೆ ಅಷ್ಟೇ ಅಲ್ಲ, ಬೇರೆ ಬೇರೆ ಕ್ಷೇತ್ರಗಳಿಗೆ ಹರಡುತ್ತಿದೆ ಕೂಡ.

ಒಂದು ಪೀಡ್ಜಾ ಕೊಳ್ಳಿ, ಮತ್ತೊಂದು 'ಫ್ರೀ'! ಮೊಬೈಲ್ ಪ್ರೊಸೆಸರ್ ಕೊಳ್ಳಿ, ಒಂದು ಪ್ರಿಂಟರ್ ಫ್ರೀ! ಸ್ಮಾರ್ಟ್ ಪಿ.ಸಿ.ಗಳು ಫ್ರೀ ಸ್ಮಾರ್ಟ್ ಫೋನ್‌ಗಳೊಡನೆ ಬರುತ್ತವೆ! ಸ್ಮಾರ್ಟ್ ಮೊಬೈಲ್ ಜೊತೆಗೆ ಹೆಡ್‌ಸೆಟ್ ಫ್ರೀ!!

ರೇಡಿಯೋ ಜಾಕಿಗಳು ಕೂಗುತ್ತಾರೆ ಒಂದು ಪ್ರಶ್ನೆಯನ್ನು ಉತ್ತರಿಸಿ ಹಾಗೂ 2 ಫಿಲ್ಮ್ ಟಿಕೆಟ್‌ಗಳನ್ನು ಅಥವಾ ಒಳ್ಳೆಯ ಹೋಟೆಲ್‌ನಲ್ಲಿ ಡಿನ್ನರ್ ಅನ್ನು 'ಫ್ರೀ' ಆಗಿ ಪಡೆಯಿರಿ!

ಕೇಬಲ್ ಆಪರೇಟರ್ಸ್ ಏಕೆ ಹಿಂದಿರಬೇಕು?

2 ವರ್ಷದ Recharge ಮಾಡಿರಿ ಹಾಗೂ 3ನೇ ವರ್ಷದ Recharge ಅನ್ನು ಫ್ರೀ ಆಗಿ ಪಡೆಯಿರಿ!

■ ನಂನಾಗ್ರಾಜ್

ಅಮ್ಮಣ್ಣಮ್ಮ ಹಾಸ್ಟೆಲ್‌ನ ಒಂದು ನೆನಪು

1956ನೇ ಜನವರಿ ಮೊದಲನೇ ಭಾನುವಾರ ನಾನು ನಗರ್ತಪೇಟೆ M.B.T. Street ನಲ್ಲಿದ್ದ ಅಮ್ಮಣ್ಣಮ್ಮನವರ ಹಾಸ್ಟೆಲ್‌ಗೆ ಸೇರಿಕೊಂಡೆ. ಆಗ ನಾನು ಹೈಸ್ಕೂಲ್ ಮೊದಲನೇ ವರ್ಷ ಓದುತ್ತಿದ್ದೆ. ನನ್ನೊಂದಿಗೆ ಎಂ.ಎ. ಅಪ್ಪಯ್ಯ, ಬಿ.ಎನ್. ವೆಂಕಟಾಚಲ, ಕೆ. ರಾಮಮೂರ್ತಿ, ಎನ್. ಚಂದ್ರಶೇಖರಯ್ಯ, ಯಮಲೂರು ಶಿವ ಹಾಗೂ ಭಟ್ಟ ಇವರುಗಳಿದ್ದರು.

ಈ ಹಾಸ್ಟೆಲ್‌ನಲ್ಲಿ ಕೆಳ ಅಂತಸ್ತಿನಲ್ಲಿ ಒಂದು ಅಡಿಗೆಮನೆ, ಊಟದ ಮನೆ, ಉಗ್ರಾಣ, ಬಚ್ಚಲುಮನೆ, ಟಾಯ್ಲೆಟ್. ಒಂದು ವಿಶಾಲವಾದ ಹಾಲ್ ಮತ್ತು ಒಂದು ವರಾಂಡ ಇತ್ತು. ಎಲ್ಲ ಹುಡುಗರಿಗೂ ಬೆಳಿಗ್ಗೆ ಮತ್ತು ರಾತ್ರಿ ಊಟದ ವ್ಯವಸ್ಥೆ ಇತ್ತು.

ಈ ಸಮಯದಲ್ಲಿ ಗುಂಜೂರು ಶ್ರೀನಿವಾಸಮೂರ್ತಿಯವರು ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದರು. ವಾರದಲ್ಲಿ ಒಂದೆರಡು ಬಾರಿ ಒಂದು ಅಡಿಗೆಗೆ ಬೇಕಾದ ಪದಾರ್ಥಗಳನ್ನು ತರಿಸಿಕೊಡುತ್ತಿದ್ದರು. ನಮಗೆ ಅಡಿಗೆ ಮಾಡಲು ಬೇರೆಯವರಿಲ್ಲದೆ ನಾವೇ ತರಕಾರಿಗಳನ್ನು ತಂದು ಹುಡುಗರೇ ಸೇರಿ ಅಡಿಗೆ ಮಾಡಿಕೊಳ್ಳುತ್ತಿದ್ದೆವು. ಬೃಹಚ್ಚರಣ ಪಂಗಡದ ಹುಡುಗರಲ್ಲದೇ ಇತರ ಬ್ರಾಹ್ಮಣ ವಿದ್ಯಾರ್ಥಿಗಳೂ ಇದ್ದರು. ಕೆಲವು ಅನುಕೂಲಸ್ಥ ವಿದ್ಯಾರ್ಥಿಗಳು ಊಟ, ವಸತಿಗಾಗಿ ತಿಂಗಳಿಗೆ 15 ರೂ.ಗಳನ್ನು ಕೊಟ್ಟು ವಾಸ್ತವ್ಯ ಹೂಡಿದ್ದರು.

ಪ್ರತಿವರ್ಷವೂ ವೆಂಕಟರಮಣಯ್ಯ ಮತ್ತು ಅವರ ಪತ್ನಿ ಅಮ್ಮಣ್ಣಮ್ಮನವರ ವೈದಿಕದ ದಿವಸ ಇಬ್ಬರು ಬ್ರಾಹ್ಮಣರಿಗೆ ಶಾಸ್ತ್ರೋಕ್ತವಾಗಿ ಶ್ರಾದ್ಧದೂಟವನ್ನು ತಯಾರು ಮಾಡಿ, ಬಡಿಸಿ, ದಕ್ಷಿಣೆ ಕೊಟ್ಟು ಹಿರಿಯ ದಾನಿಗಳ ನೆನಪು ಮಾಡಿಕೊಳ್ಳುತ್ತಿದ್ದೆವು.

ನಾನು 1956ರಿಂದ 1963ರ ವರೆಗೆ ಹಾಸ್ಟೆಲ್‌ನಲ್ಲೇ ಇದ್ದು ವಿದ್ಯಾಭ್ಯಾಸ ಮುಗಿಸಿದೆ. ಆ ಸಮಯದಲ್ಲಿ ಜಿ. ಶ್ರೀನಿವಾಸಮೂರ್ತಿ (ಮ್ಯಾನೇಜಿಂಗ್ ಟ್ರಸ್ಟಿ) ಹಾಗೂ ಮ್ಯಾಜಿಸ್ಟ್ರೇಟ್ ಕೆ. ಶ್ರೀನಿವಾಸ್, ನಾಗವಾರಪಾಳ್ಯದ ಅಲಸೂರು ಶ್ರೀಕಂಠಯ್ಯ, ವಿ.ವಿ. ಪುರಂನ ಡಾ॥ ದಾನಪ್ಪ, ಸಣ್ಣೆ ಶ್ರೀನಿವಾಸಯ್ಯ ಹಾಗೂ ಹೊಸಕೋಟೆ ವೆಂಕಟಸುಬ್ಬಯ್ಯ ಇವರುಗಳು ಸದಸ್ಯರುಗಳಾಗಿದ್ದು ಈ ಸಮಯದಲ್ಲಿ ಅವರುಗಳನ್ನೆಲ್ಲಾ ನೆನಪು ಮಾಡಿಕೊಳ್ಳುವುದು ನನ್ನ ಧರ್ಮ.

ಕೊನೆಯದಾಗಿ ತಾವು ವಾಸವಾಗಿದ್ದ ಮನೆಯನ್ನೇ ಉಚಿತ ವಿದ್ಯಾರ್ಥಿನಿಲಯವನ್ನಾಗಿ ಮಾರ್ಪಡಿಸಿದ ಹಾಗೂ ಆಗಿನ ಮೈಸೂರು ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್‌ರವರಿಂದ ಪುರಸ್ಕೃತಗೊಂಡ, ಬೃಹಚ್ಚರಣದ ಏಕೈಕ ಸಮಾಜಸೇವಾ ಧುರೀಣ ಧರ್ಮನಿರತ, ಜಿ. ವೆಂಕಟರಮಣಯ್ಯನವರಿಗೂ ಹಾಗೂ ಪತ್ನಿ ಅಮ್ಮಣ್ಣಮ್ಮನವರಿಗೂ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ನೆನಪಿಸಿಕೊಳ್ಳುತ್ತೇನೆ.

■ ಎಂ.ಆರ್. ಸೂರ್ಯನಾರಾಯಣ

ಸಂಘದ ನೂತನ ಸದಸ್ಯರು

ಸುನಿಲ್ ವಿ. (ಎಂ. 410), ಅನಂತಸ್ವಾಮಿ ಎಸ್. (ಎಂ.411)
ಶ್ರೀಧರಮೂರ್ತಿ ಬಿ.ಪಿ. (ಎಂ. 412)

ಗುರು

ಗುರುವೆ ಸರ್ವಲೋಕಾನಾಂ। ಭಿಷಜೆ ಭವರೋಗಿಣಾಂ॥
ನಿಧಯೇ ಸರ್ವ ವಿದ್ಯಾನಾಂ । ದಕ್ಷಿಣಾ ಮೂರ್ತಯೇ ನಮಃ ॥

ಯಾಜ್ಞವಲ್ಕ್ಯ–ಜನಕ ಮಹಾರಾಜ, ಜನಕ–ಶುಕ್ರಾಚಾರ್ಯ, ವಿಶ್ವಾಮಿತ್ರ–ಶ್ರೀರಾಮ, ವಾಲ್ಮೀಕಿ–ಲವಕುಶ, ವ್ಯಾಸರು–ಜೈಮಿನಿ, ವೈಶಂಪಾಯನ, ಪೈಲ, ಸುಮಂತ, ಸಾಂದೀಪಿನಿ–ಶ್ರೀಕೃಷ್ಣ, ದ್ರೋಣಾಚಾರ್ಯ–ಅರ್ಜುನ, ನಿವೃತ್ತಿ–ಜ್ಞಾನದೇವ, ರಮಾನಂದ–ಕಬೀರ್, ರಾಮಕೃಷ್ಣರು–ವಿವೇಕಾನಂದ. ಹೀಗೆ ಈ ಸಂಬಂಧಗಳನ್ನು ಶಬ್ದಗಳಿಂದ ಬಣ್ಣಿಸುವುದು ಅಸಾಧ್ಯ. ಇಂತಹ ಸದ್ಗುರುಗಳ ಕೃಪೆಯಿಂದ ಅನುಗ್ರಹಿತರಾದ ಶಿಷ್ಯರು ತಮ್ಮ ಜೀವನವನ್ನು ಸಾಫಲ್ಯಗೊಳಿಸಿ ಕೊಳ್ಳುವುದರೊಂದಿಗೆ ಇಂದಿಗೂ ನಮಗೆಲ್ಲರಿಗೂ ಆದರ್ಶ ವ್ಯಕ್ತಿಗಳಾಗಿದ್ದಾರೆ. 'ಗುರು' ಎಂಬುದು ಒಂದು ವ್ಯಕ್ತಿಯಲ್ಲ. ಅದೊಂದು ತತ್ತ್ವ. ಇದನ್ನು ಒಂದೆಡೆ ಅಲ್ಲದೆ ಸರ್ವದಲ್ಲೂ ಕಾಣುವಂತಾಗಬೇಕು.

ಗುರು ಬ್ರಹ್ಮಾ ಗುರುರ್ವಿಷ್ಣುಃ ॥ ಗುರುರ್ದೇವೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ॥

ಗುರುವೆಂದರೆ ಬ್ರಹ್ಮ, ವಿಷ್ಣು, ಮಹೇಶ್ವರರ ಸ್ವರೂಪ. ಗುರುವೇ ಸರ್ವಸ್ವವು.

ಶ್ರೀ ಕೃಷ್ಣನು ಶ್ರೀ ಮದ್ಭಗವದ್ಗೀತೆಯಲ್ಲಿ ಹೀಗೆ ಹೇಳಿದ್ದಾನೆ

ತದ್ವಿದ್ಧಿ ಪ್ರಾಣಿಪಾತೇನ ಪರಿಪ್ರಶ್ನೇನ ಸೇವಯಾ ॥

ಜ್ಞಾನವನ್ನು ಪ್ರಣಾಮದಿಂದ ಮತ್ತೆ ಮತ್ತೆ ಪ್ರಶ್ನೆಗಳನ್ನು ಕೇಳುವುದರಿಂದ ಮತ್ತು ಸೇವೆಯಿಂದ ದೊರಕಿಸಬೇಕಾಗುತ್ತದೆ. ಶಿಕ್ಷಣದಿಂದ ದೊರೆಯುವ ಜ್ಞಾನವು ಪರಿಶ್ರಮದಿಂದಲೇ ಸಾಧ್ಯ. ಹೀಗೆ ಗುರುವು ಕರುಣಿಸುವ ಜ್ಞಾನವು ಪ್ರಣಾಮ/ಸೇವೆ ಎಂಬ ಎರಡು ಮಾರ್ಗಗಳಿಂದ ಸಾಧ್ಯ. ಗುರು ಅನುಗ್ರಹಿಸಿದ ವಿದ್ಯೆಯು ಬಹಳ ಅಮೂಲ್ಯವಾದುದು. ವಿದ್ಯೆಯ ಮಹತ್ವವು ಸುಭಾಷಿತದಲ್ಲಿ ಇಂತಿದೆ:

ನಚೋರಹಾರ್ಯಂ ನಚರಾಜಹಾರ್ಯಂ
ನ ಭಾತೃಭಾಜ್ಯಂ ನ ಚ ಭಾರಕಾರಿ ॥ ವ್ಯಯೇ ಕೃತೇ ವರ್ಧತೇ
ಏವ ನಿತ್ಯಂ ವಿದ್ಯಾಧನಂ ಸರ್ವಧನ ಪಧಾನಂ॥

ವಿದ್ಯೆಯನ್ನು ಯಾರಿಂದಲೂ ಕದಿಯಲಸಾಧ್ಯ. ಅದನ್ನು ಒಡಹುಟ್ಟಿದವರೊಂದಿಗೆ ವಿಭಾಗಿಸಲಾಗುವುದಿಲ್ಲ. ವಿದ್ಯೆಯು ಹೆಚ್ಚಾದರೆ ಭಾರವಾಗದು. ವ್ಯಯ ಮಾಡಿದಷ್ಟೂ ವೃದ್ಧಿಯಾಗುತ್ತದೆ. ಆದ್ದರಿಂದಲೇ ವಿದ್ಯೆಯು ಸರ್ವಧನಗಳಲ್ಲಿ ಪ್ರಧಾನವಾದದ್ದು.

ಶಂಕರ ಭಗವತ್ಪಾದರು 'ಗುರ್ವಷ್ಟಕ'ದಲ್ಲಿ ಹೀಗೆ ಹೇಳಿದ್ದಾರೆ–

ಶರೀರಂ ಸುರೂಪಂ ತಥಾ ವಾ ಕಲತ್ರಂ ।
ಯಶಶ್ಚಾರು ಚಿತ್ರಂ ಧನಂ ಮೇರುತುಲ್ಯಂ ।
ಮನಶ್ಚೇನ ಲಗ್ನಂ ಗುರೋರಂಘ್ರಿ ಪದ್ಮೇ ।
ತತಃ ಕಿಂ ತತಃ ಕಿಂ ತತಃ ಕಿಂ ಕತಃ ಕಿಂ ॥

ಸುಂದರವಾದ ಶರೀರ, ಮನೋನುಕೂಲಳಾದ ಪತ್ನಿ, ಅಪಾರಕೀರ್ತಿ – ಸಂಮಾನಗಳು, ಮೇರು ಪರ್ವತಕ್ಕೆ ಸಮಾನವಾದ ಸಂಪತ್ತು ಇದ್ದರೂ ಮನುಷ್ಯನಿಗೆ ಗುರು ಚರಣಗಳಲ್ಲಿ ಶ್ರದ್ಧೆ – ಭಕ್ತಿಗಳಿಲ್ಲದಿದ್ದರೆ ಎಲ್ಲವೂ ವ್ಯರ್ಥವೇ ಸರಿ. ಅವನು ಸಂಸಾರದಿಂದ ಬಿಡುಗಡೆ ಹೊಂದಲಾರ.

ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಗುರುವಿನ ಪಾತ್ರದ ಬಗ್ಗೆ ಹೀಗೆ ಹೇಳಿದ್ದಾರೆ :

ಗುರುವಿನ ಕರುಣದಿಂದ ಲಿಂಗ – ಜಂಗಮನ ಕಂಡೆ ।
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ ।
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ ।
ಚೆನ್ನಮಲ್ಲಿಕಾರ್ಜುನಯ್ಯ.... ।
ನಾ ಹುಟ್ಟಿದೊಡನೆ ವಿಭೂತಿಯ ಪಟ್ಟವ ಕಟ್ಟಿ ।
ಸದ್ಗುರು ಸ್ವಾಮಿ ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು ॥

ಪುರಂದರ ದಾಸರು ತಮ್ಮ ದೇವರನಾಮದಲ್ಲಿ 'ಗುರುವಿನ ಗುಲಾಮ ನಾಗುವ ತನಕ ದೊರೆಯದಣ್ಣ ಮುಕುತಿ' ಎಂದಿದ್ದಾರೆ. ವಿದ್ಯೆಯು ಅನುಗ್ರಹವಾಗಬೇಕಾದರೆ ನಾವು ಸಂಪೂರ್ಣವಾಗಿ ಗುರುವಿಗೆ ಶರಣಾಗಬೇಕು.

ಗುರುವಿನ ಕೌನ್ ಬತಾವೇ ಬಾತ್ ಬಡಾ ವಿಕಟ್ ಯಮಘಾತ್ ॥

ಎಂದು ಕಬೀರದಾಸರು ಹಾಡಿದ್ದಾರೆ.

ಸಂತ ತ್ಯಾಗರಾಜರು ತಮ್ಮ ಕೃತಿಯಲ್ಲಿ ಗುರುಲೇಕ ಎಟುವಂಟಿ ಗುಣಿಕಿ: **ದೆಲಿಯುಗ ಬೋದು । ಕರುಲೈನ ಹೃದ್ರೋಗ ಗಹನ ಮುನುಗೊಟ್ಟುನು** ॥ ಎಂದಿದ್ದಾರೆ. ಈ ಕೃತಿಯಲ್ಲಿ ತ್ಯಾಗರಾಜರು ಗುರುವು ಶ್ರೇಷ್ಠವಾದ ಜ್ಞಾನವನ್ನು ನೀಡುತ್ತಾನೆ ಎಂದಿದ್ದಾರೆ.

ಸಂತ ಭದ್ರಗಿರಿ ಕೇಶವದಾಸರು ತಮ್ಮ ಸರಳ ಭಾಷೆಯಲ್ಲಿ ಭಜನೆಯೊಂದರಲ್ಲಿ 'ಗುರುವಿನ' ಬಗ್ಗೆ ಈ ರೀತಿ ಹೇಳಿದ್ದಾರೆ. ಹರಿಮುನಿಯಲು ಗುರು ಪೊರೆಯಬಲ್ಲನು.

ಗುರು ಮುನಿದರೆ ಪೊರೆವರು ಯಾರಿಹರು.
ಗುರುವೆ ಪರಾತ್ಪರ ಗುರುವೆ ಸಂಕಟಹರ
ಗುರುವೆ ಹರಿಹರ ಬ್ರಹ್ಮ ಸ್ವರೂಪನು.

ಬೃಹಚ್ಚರಣ ವಾಗ್ಗೇಯಕಾರರಾದ ಪಂಡಿತ್ ಶೇಷಾದ್ರಿ ಗವಾಯ್‌ರವರು ತಮ್ಮ ರಚನೆಯಲ್ಲಿ ಗುರುಗಳ ಬಗ್ಗೆ ಹೀಗೆ ಬರೆದಿದ್ದಾರೆ.

ಧಾರೆಯೆರೆದೆ ಭಕುತರಿಗೆ ತಪ್ಪದಫಲ
ದಾರಿ ತೋರಿ ಪರಿಹರಿಸಿದೆ ಕತ್ತಲ
ಗುರುವರ ಕಾಯೋ ಯತಿ ರಾಘವ ॥

ಬೃಹಚ್ಚರಣ ಹಿರಿಯ ಆಧ್ಯಾತ್ಮ ಚಿಂತಕಿ – ಶ್ರೀಮತಿ ಭ್ರಮರಾ ಗೋಪಿನಾಥ್‌ರವರ 'ಗುರು' ಕುರಿತ ರಚನೆ ಇಂತಿದೆ.

ಸುಲಭದಿ ಮಾರ್ಗವ ತೋರುವ ಗುರುವೆ
ಒಲವಿನಲಿ ನೀ ನನ್ನೊಡನಿರುವೆ ॥

ಗುರು - Teacher
T - Thought full
E - Educative
A - Approachable
C - Creativity
H - Honesty
E - Efficiently
R - Regularity

ಈ ಗುಣಗಳ ಸಮೂಹವೇ ಗುರು Teacher ಮತ್ತು Cheater ಎಂಬ ಎರಡು ಆಂಗ್ಲ ಶಬ್ದಗಳಿಗೂ ಒಂದೇ ಅಕ್ಷರಗಳಿವೆ. ಆದರೆ ಈ ಎರಡೂ ಪದಗಳು ಸಂಪೂರ್ಣ ವ್ಯತ್ಯಾಸವಾಗಿದೆ.

A teacher will never cheat one who cheats can never be a teacher.

ನಾವು ಅನೇಕ ಬಾರಿ ಗುರು, ಆಚಾರ್ಯ, ಶಿಕ್ಷಕ – ಈ ಮೂರು ಪದಗಳು ಒಂದೇ ಎಂದು ಭಾವಿಸುತ್ತೇವೆ. ಆದರೆ ಈ ಮೂರು ಪದಗಳಿಗೂ ಬೇರೆ ಬೇರೆ ಅರ್ಥಗಳಿವೆ.

ಶಿಕ್ಷಕ – ಶಿಕ್ಷಣಕ್ಕಾಗಿ ಶಿಕ್ಷೆಯನ್ನು ಕೊಡುತ್ತಾನೆ.

ಗುರು – ಬೋಧನೆ ಮೂಲಕ ಶಿಕ್ಷಣ.

ಆಚಾರ್ಯ–ಬೋಧಿಸುವುದರೊಂದಿಗೆ ಆಚರಣೆಯಲ್ಲೂ ಇರುತ್ತಾರೆ.

ಶಿಕ್ಷಕನು ತನ್ನ ಎಲ್ಲ ಶಿಷ್ಯರಿಗೂ ಒಂದೇ, ರೀತಿಯಲ್ಲಿ ಭೇದ ಭಾವವಿಲ್ಲದೆ ಬೋಧಿಸುತ್ತಾನೆ. ಗುರುವು ತನ್ನ ಶಿಷ್ಯರ ಗ್ರಹಣಾಶಕ್ತಿ, ಸಾಮರ್ಥ್ಯವನ್ನು ಗಮನಿಸಿ ಅದಕ್ಕನುಗುಣವಾಗಿ ಬೋಧಿಸುತ್ತಾನೆ. ಆಚಾರ್ಯನೂ ಗುರುವಂತೆಯೇ ಆದರೆ ಬೋಧನೆಯೊಂದಿಗೆ ಆಚರಣೆಯಲ್ಲಿರುತ್ತಾನೆ.

ಇಂತಹ ಗುರುವು ನಮ್ಮಿಂದ ಏನನ್ನೂ ಬಯಸುವುದಿಲ್ಲ. ತನ್ನಲ್ಲಿರುವ ಎಲ್ಲಾ ಜ್ಞಾನವನ್ನು ನಿಸ್ವಾರ್ಥತೆಯಿಂದ, ಪೂರ್ಣ ಮನಸ್ಸಿನಿಂದ ಪ್ರತಿಯೊಬ್ಬ ಶ್ರದ್ಧೆಯುಳ್ಳ ಶಿಷ್ಯನಿಗೆ ಅನುಗ್ರಹಿಸುವನು. ಗುರುಗಳಿಗೆ ನಾವು ಏನೇ ಗುರುದಕ್ಷಿಣೆ ಕೊಟ್ಟರೂ ಅದು ಕಡಿಮೆಯೇ.

ಮನುಸ್ಮೃತಿಯಲ್ಲಿ ಹೇಳಿದೆ : 'ನಿಮ್ಮ ಬಳಿಯಲ್ಲಿ ಕೊಡಲು ಏನೂ ಇಲ್ಲದಿದ್ದರೆ ಆವಿಗೆಯ ಜೋಡನ್ನಾದರು ಗುರುವಿಗೆ ಅರ್ಪಿಸಿರಿ. ಒಂದು ಮಣ್ಣಿನ ಕೊಡದಲ್ಲಿ ನೀರು ತುಂಬಿಕೊಡಿ. ಆದಾಗದಿದ್ದರೆ ಒಂದು ಹೂವನ್ನಾದರೂ ಅರ್ಪಿಸಿರಿ'.

(ಈ ಲೇಖನಕ್ಕೆ ಸಂಬಂಧಿಸಿದ ಶ್ರೀ ಶಂಕರ ಭಗವತ್ಪಾದರ ಚಿತ್ರ ಮುಖಪುಟದಲ್ಲಿದೆ)

■ **ಅಚಲ ರಮೇಶ್**

ಹಾಸ್ಯ ಚಟಾಕಿ

ಮಗನ ಮದುವೆಯ ಹಿಂದಿನ ದಿನ ತಂದೆ ಮಗನಿಗೆ ಹೇಳಿದ ಬುದ್ಧಿವಾದ

ತಂದೆ : ಮದುವೆಯ ನಂತರ ನೀನು ಅನುಸರಿಸಬೇಕಾದ ಎರಡು ಮುಖ್ಯ ಅಂಶಗಳು ಪ್ರಾಮಾಣಿಕತೆ ಮತ್ತು ಬುದ್ಧಿವಂತಿಕೆ.

ಮಗ : ಪ್ರಾಮಾಣಿಕತೆ ಅಂದರೆ ಏನಪ್ಪಾ ?

ತಂದೆ : ನಿನ್ನ ಹೆಂಡತಿಗೆ ಮಾತು ಕೊಟ್ಟ ಮೇಲೆ ಅದರಂತೆ ನಡೆಯಬೇಕು.

ಮಗ : ಬುದ್ಧಿವಂತಿಕೆ ಅಂದರೆ ಏನಪ್ಪ ?

ತಂದೆ : ಮಾತು ಕೊಡದಿರುವುದು.

* * *

ಗೃಹಿಣಿಯೊಬ್ಬಳು ಬ್ಯಾಂಕಿಗೆ ಹೋಗಿ ಮ್ಯಾನೇಜರ್ ಅವರನ್ನು ಜಂಟಿ ಖಾತೆಯ ಬಗ್ಗೆ ತಿಳಿಸಿ ಎಂದು ಕೇಳಿದಳು.

ಅದಕ್ಕೆ ಮ್ಯಾನೇಜರ್ ಇಂತೆಂದರು

'ನಿಮ್ಮ ಪತಿ ಖಾತೆ ತುಂಬಿಸಿದ ಹಣವನ್ನು ನೀವು ಹಿಂದಕ್ಕೆ ಪಡೆಯುವುದೇ ಜಂಟಿ ಖಾತೆ.

■ **ಆರ್.ಎನ್. ವೆಂಕಟಸುಬ್ಬರಾವ್**

ನಾಗೇಶ್ವರ ಕ್ಷೇತ್ರದಲ್ಲಿ ಉಪಾಕರ್ಮ

20–8–2013 ಮಂಗಳವಾರ ವಿಪ್ರರ ಸಾಮೂಹಿಕ ಉಪಾಕರ್ಮ ಕಾರ್ಯಕ್ರಮವು ಸಹೃದಯ ವೃಂದದವರಿಂದ ನೆರವೇರಿತು. ಸುಮಾರು 85 ಮಂದಿ ಭಾಗವಹಿಸಿದ ಧಾರ್ಮಿಕ ಕಾರ್ಯಕ್ರಮ ವೇದಬ್ರಹ್ಮ ಶ್ರೀ ನಂಜುಂಡ ದೀಕ್ಷಿತರ ಮಾರ್ಗದರ್ಶನದಲ್ಲಿ ನೆರವೇರಿತು.

ವಿಶ್ವವಿದ್ಯಾನಿಲಯದಿಂದ ಪದವಿ ಪಡೆದ
ನಮ್ಮ ಸಮುದಾಯದ ಮಕ್ಕಳು

ಕುಮಾರಿ ದೀಪ್ತಿ ವೆಂಕಟೇಶ್ ಬಿ.ಇ. (ಶ್ರೀ ಎಸ್. ವೆಂಕಟೇಶ್ ಹಾಗೂ ಶ್ರೀಮತಿ ರಾಧಾರವರ ಪುತ್ರಿ), **ಕುಮಾರಿ ಮಾನಸ,** ಬಿ.ಕಾಂ., (ಶ್ರೀ ನಾಗೇಶ್–ದಾಕ್ಷಾಯಿಣಿವರ ಮಗಳು), **ಕು॥ ವರ್ಷಿಣಿ,** ಬಿ.ಕಾಂ., (ಶ್ರೀ ಆರ್.ಪಿ.ರವಿಶಂಕರ್–ಮಂಗಳಾರವರ ಪುತ್ರಿ), **ಕು॥ ರಶ್ಮಿ,** ಬಿ.ಕಾಂ., (ಶ್ರೀ ಶಶಿಭೂಷಣ್–ರಾಧರವರ ಮಗಳು), **ಅಚಲ ರಮೇಶ್,** ಬಿ.ಇ., (ಶ್ರೀ ರಮೇಶ್–ಶ್ರೀಮತಿ ಲಲಿತರವರ ಪುತ್ರಿ), **ಅಂಜಲಿ ಚಂದ್ರಶೇಖರ್** ಬಿ.ಇ, (ಶ್ರೀಮತಿ ರಮಾ–ಶ್ರೀ ಚಂದ್ರಶೇಖರ್‌ರವರ ಪುತ್ರಿ) **ಅಭಿಲಾಷ ಪ್ರದೀಪ್ ಕುಮಾರ್,** ಬಿ.ಇ. (ಶ್ರೀಮತಿ ನಂದ ಹಾಗೂ ಪ್ರದೀಪ್ ಕುಮಾರ್ ಪುತ್ರಿ), **ಶ್ರೀಮತಿ ಪದ್ಮಿನಿ ಅಜಯ್,** ಎಂ.ಎ. ಸಂಸ್ಕೃತ (ಶ್ರೀ ವಿ.ಎಸ್.ರಾಮಚಂದ್ರನ್–ಸರಸ್ವತಿಯವರ ಪುತ್ರಿ), **ಚಿ॥ ಶ್ರೀನಿವಾಸ ಕುಮಾರ್,** ಬಿ.ಎಸ್ಸಿ., (ಶ್ರೀ ಬೆಳ್ಳಾವೆ ನಾಗರಾಜ್–ಶ್ರೀಮತಿ ರಾಧರವರ ಪುತ್ರ).

ನೂತನ ಗೃಹಪ್ರವೇಶ

ಸಂಘದ ಸದಸ್ಯೆ ಶ್ರೀಮತಿ ಕೆ. ಸರಸ್ವತಿಯವರು ಬೆಂಗಳೂರು ಈಶ್ವರ ಬಡಾವಣೆ, ಬೀರೇಶ್ವರನಗರದಲ್ಲಿ ನಿರ್ಮಿಸಿರುವ ತಮ್ಮ ನೂತನ ಗೃಹ **"ಶ್ರೀ ವಿಭಾ"** ಪ್ರವೇಶ ಸಮಾರಂಭವನ್ನು 25–8–2013ರಂದು ನೆರವೇರಿಸಿದರು. ಶ್ರೀಮತಿ ಸರಸ್ವತಿ ಕುಟುಂಬಕ್ಕೆ **ಬೃಹಚ್ಚರಣ** ಶುಭ ಹಾರೈಸುತ್ತದೆ.

ನಮ್ಮ ಸದಸ್ಯ ಶ್ರೀ ಜಿ.ಎಸ್. ವೆಂಕಟೇಶ್‌ರವರು, ಬೆಂಗಳೂರು ವೈಯಾಲಿಕಾವಲ್‌ನಲ್ಲಿ ನಿರ್ಮಿಸಿರುವ ತಮ್ಮ ನೂತನ ಗೃಹ **"ಶ್ರೀನಿವಾಸ"** ಪ್ರವೇಶವನ್ನು 19–5–2013ರಂದು ನೆರವೇರಿಸಿದರು. ಈ ಸಂದರ್ಭದಲ್ಲಿ **ಬೃಹಚ್ಚರಣ** ಶ್ರೀ ವೆಂಕಟೇಶ್ ಕುಟುಂಬಕ್ಕೆ ಶುಭ ಹಾರೈಸುತ್ತದೆ.



ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ

ಸಾಮಾನ್ಯವಾಗಿ 45–50ರ ಮದ್ಯವಯಸ್ಕರಲ್ಲಿ ಮಂಡಿನೋವು ಆರಂಭ ವಾಗುತ್ತದೆ. ಇದಕ್ಕೆ ಹೆಣ್ಣು, ಗಂಡು ಎಂಬ ಭೇದವೇನಿಲ್ಲ. ಯಾವುದೇ ಕಾರಣಗಳಿಂದ ಬಂದಿರಬಹುದು. ಅತಿಯಾದ ದೇಹದತೂಕ, ಮೂಳೆಗಳ ಸವೆತ, ಅಪಘಾತಗಳಿಂದ ಆ ಭಾಗಕ್ಕೆ ಪೆಟ್ಟಾಗಿರಬಹುದು ಅಥವಾ ಕೀಲುಗಳಿಗೆ ಹಾನಿಯಾಗಿದ್ದರೆ (ಜಾಯಿಂಟ್ಸ್) ಸಂಧಿವಾತ, (ಆರ್ಥರೈಟಿಸ್) ಇದೆಲ್ಲದರಿಂದ ಮಂಡಿನೋವು ಬರುತ್ತದೆ.

ತೀವ್ರತರವಾದ ನೋವಿದ್ದರೆ ತಡ ಮಾಡದೆ ಮೂಳೆ ತಜ್ಞರನ್ನು ಭೇಟಿ ಮಾಡಿ ಸೂಕ್ತ ಚಿಕಿತ್ಸೆ ಸಲಹೆ ಪಡೆದು, ಮುಂದೆ ಸಮಸ್ಯೆಯಾಗದಂತೆ ಎಚ್ಚರಿಗೆ ವಹಿಸಬೇಕು.

ಆರಂಭದಲ್ಲಿ ಸ್ವಲ್ಪ ನೋವಿದ್ದಾಗ ನಾವು ಸ್ವಲ್ಪ ಎಚ್ಚರಿಕೆ ವಹಿಸಿ ಮನೆಯಲ್ಲೇ ಔಷಧಿ, ಪಥ್ಯ, ವ್ಯಾಯಾಮಗಳಿಂದ ನೋವನ್ನು ಹತೋಟಿಯಲ್ಲಿಡಬಹುದು.

1. ದೇಹದ ತೂಕ ಅಧಿಕವಾಗಿದ್ದರೆ ಮೊದಲು ತೂಕ ಇಳಿಸಿಕೊಳ್ಳಬಹುದು ಅದರಿಂದ ದೇಹದ ಭಾರ ಮಂಡಿ ಮೇಲೆ ಬೀಳುವುದು ತಪ್ಪಿ ನೋವು ಕಡಿಮೆಯಾಗುತ್ತದೆ
2. ಪ್ರತಿದಿನ ನಿಯಮಿತವಾಗಿ ಬೆಳಿಗ್ಗೆ ಮತ್ತು ಸಂಜೆ ವಾಕಿಂಗ್, ವ್ಯಾಯಾಮ ಮಾಡಬೇಕು.
3. ಪ್ರತಿದಿನ ಬಿಸಿನೀರಿನ ಸ್ನಾನದಿಂದ ಆಯಾಸ ಪರಿಹಾರ.
4. ಪ್ರತಿದಿನ ಹಣ್ಣು ಹಸಿರು ತರಕಾರಿ, ಸೊಪ್ಪು, ಹಾಲು, ಮಜ್ಜಿಗೆ, ಖರ್ಜೂರ ಸೇವಿಸಬೇಕು. ಹಾಲಿನಲ್ಲಿ ಮೂಳೆಗಳು ಗಟ್ಟಿಯಾಗಲು ಅಗತ್ಯವಾದ ಕ್ಯಾಲ್ಸಿಯಂ ಮತ್ತು ರಂಜಕಾಂಶ ಇದೆ. ಖರ್ಜೂರದಲ್ಲಿ ಕಬ್ಬಿಣಾಂಶ ಇದೆ.
5. ಉಪ್ಪು, ಸಕ್ಕರೆ ಮತ್ತು ಕೊಬ್ಬಿನಂಶ ಇರುವ ಎಲ್ಲವನ್ನೂ ಕಡಿಮೆ ಮಾಡಬೇಕು.
6. ಪೈನಾಪಲ್ ರಸ ಸಕ್ಕರೆ ಇಲ್ಲದೆ ಸೇವಿಸಬೇಕು. ಇದರಿಂದ ಕೀಲು ನೋವು ಕಡಿಮೆ ಆಗುತ್ತದೆ.
7. ಮಾನಸಿಕ ಒತ್ತಡ ಕಡಿಮೆ ಮಾಡಿಕೊಂಡರೆ ಮಂಡಿನೋವು ಕಡಿಮೆ ಆಗುತ್ತದೆ.
8. ಎರಡು ಟೀ ಚಮಚ ಕೊಬ್ಬರಿ ಎಣ್ಣೆಯನ್ನು ಸ್ವಲ್ಪ ಕರ್ಪೂರ ಸೇರಿಸಿ ನೋವಿರುವ ಭಾಗಕ್ಕೆ ಮಸಾಜ್ ಮಾಡಿದರೆ ನೋವು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ.
9. ಪ್ರತಿದಿನ ಬೆಳಗ್ಗೆ, ಸಂಜೆ 12 ತುಲಸಿ ಎಲೆಗಳನ್ನು ಶುದ್ಧವಾದ ನೀರಿನಲ್ಲಿ ತೊಳೆದು, ಅಗಿದು ಅದರ ರಸ ನುಂಗುತ್ತಿದ್ದರೆ ಮಾನಸಿಕ ಒತ್ತಡ ಕಡಿಮೆ ಆಗುತ್ತದೆ.
10. ಊಟದಲ್ಲಿ ಮೆಂತ್ಯಸೊಪ್ಪು, ನುಗ್ಗೆ ಸೊಪ್ಪು, ಹೆಸರು ಕಾಳುಗಳನ್ನು ಬಳಸಬೇಕು.
11. ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ಆದಷ್ಟೂ ಕಡಿಮೆ ಮಾಡಿದರೆ ದೇಹದ ತೂಕ ಇಳಿಯುತ್ತದೆ.
12. ಊಟದಲ್ಲಿ ಹಿಂಗನ್ನು ಜಾಸ್ತಿ ಬಳಸಬೇಕು.
13. ಹಸಿ ಶುಂಠಿ ಅಥವಾ ಒಣ ಶುಂಠಿ ಪುಡಿ ಜೊತೆ ಸ್ವಲ್ಪ ಬೆಲ್ಲದ ಪುಡಿ ಮಿಶ್ರ ಮಾಡಿ ಒಂದು ಟೀ ಚಮಚದಷ್ಟು ದಿನಕ್ಕೆರಡು ಬಾರಿ ಸೇವಿಸಿದರೆ ಮಂಡಿ ನೋವಿಗೆ ಒಳ್ಳೆಯದು.
14. ಒಣಶುಂಠಿ ಪುಡಿ ಜೊತೆ ನೀಲಗಿರಿ ತೈಲ ಮತ್ತು ಬೆಳ್ಳುಳ್ಳಿ ಜಜ್ಜಿ ಅದನ್ನು ಸೇರಿಸಿ ಎಲ್ಲವನ್ನೂ ಮಂಡಿ ನೋವಿಗೆ ಮಸಾಜ್ ಮಾಡಬೇಕು.
15. ಸಂಧಿವಾತ ಇರುವವರು ಸೇವಿಸಬಹುದಾದ ತರಕಾರಿಗಳೆಂದರೆ, ಹೀರೇಕಾಯಿ, ಕ್ಯಾರೆಟ್, ಪಡುವಲಕಾಯಿ, ಮೂಲಂಗಿ, ಹಾಗಲಕಾಯಿ, ನುಗ್ಗೇಕಾಯಿ ಇತ್ಯಾದಿ.
16. ನಿಷಿದ್ಧ ತರಕಾರಿಗಳೆಂದರೆ ಬೆಂಡೆಕಾಯಿ, ಹಲಸಿನಹಣ್ಣು, ಆಲೂಗೆಡ್ಡೆ, ಗೆಣಸು, ಬದನೆಕಾಯಿ, ಕುಂಬಳಕಾಯಿ, ನೀಲಿದ್ರಾಕ್ಷಿ ಮುಂತಾದವುಗಳು.
17. ಪ್ರತಿದಿನ ಕನಿಷ್ಠ ಎರಡು ಲೀಟರ್ ನೀರನ್ನು ಕುಡಿಯಬೇಕು.
18. ಪದೇ ಪದೇ ಮೆಟ್ಟಿಲು ಹತ್ತಿ ಇಳಿದು ಮಾಡಬಾರದು. ಮೆಟ್ಟಿಲು ಹತ್ತಿ ಇಳಿಯಬೇಕಾದರೆ ಮೊದಲು ನೋವಿಲ್ಲದ ಕಾಲನ್ನು ಮುಂದಿಟ್ಟು ಅನಂತರ ನೋವಿರುವ ಕಾಲನ್ನು ಇಡಿ. ಅದರಿಂದ ಮಂಡಿಗೆ ಹೆಚ್ಚು ಆಯಾಸವಾಗುವುದಿಲ್ಲ.
19. ಮಂಡಿ ನೋವಿನ ರೋಗಿಗಳು ಚಳಿಗಾಲ, ಮಳೆಗಾಲದಲ್ಲಿ ದೂರದ ಊರಿಗೆ ಪ್ರಯಾಣ, ಪ್ರವಾಸ ಮಾಡದಿರುವುದು ಒಳ್ಳೆಯದು.
20. ಚಳಿಗಾಲದಲ್ಲಿ ಬೆಚ್ಚಗಿನ ಬಟ್ಟೆಗಳನ್ನು ಧರಿಸಿ, ಮಂಡಿಯನ್ನು ಬೆಚ್ಚಗಿಟ್ಟಿರಬೇಕು.
21. ದ್ವಿಚಕ್ರ ವಾಹನದಲ್ಲಿ ಹೆಚ್ಚು ದೂರ ಹೋಗಬಾರದು. ದೈಹಿಕ ಆಯಾಸ ಹೆಚ್ಚಾಗುತ್ತದೆ. ಮಂಡಿ ನೋವೂ ಸಹ ಹೆಚ್ಚಾಗುತ್ತದೆ.
22. ಬೆಳಗ್ಗೆ ಉಪಹಾರದ ನಂತರ ಮತ್ತು ರಾತ್ರಿ ಊಟವಾದ ನಂತರ ಶುಂಠಿ ಪುಡಿ ಬಿಸಿ ನೀರಿಗೆ ಹಾಕಿ ಚೆನ್ನಾಗಿ ಕಲೆಸಿ ಕುಡಿಯುತ್ತಿದ್ದರೆ ಮಂಡಿ ನೋವು ಕಡಿಮೆ ಆಗುತ್ತದೆ.
23. ವೈದ್ಯರ ಸಲಹೆ ಇಲ್ಲದೆ ನೋವು ನಿವಾರಕ ಮಾತ್ರೆಗಳನ್ನು ಸೇವಿಸಬಾರದು. ಖಾಲಿ ಹೊಟ್ಟೆಯಲ್ಲಿ ಸೇವಿಸಬಾರದು.
24. ಬೇವಿನ ರಸಕ್ಕೆ ಕೊಬ್ಬರಿ ಎಣ್ಣೆ ಮಿಶ್ರ ಮಾಡಿ ನೋವಿರುವ ಜಾಗಕ್ಕೆ ಉಜ್ಜಿದರೆ ನೋವು ಕಡಿಮೆ ಆಗುತ್ತದೆ.
25. ಕೀಲು ನೋವು ಕಡಿಮೆ ಆಗಲು ನಿಂಬೆಹಣ್ಣಿನ ರಸಕ್ಕೆ ಸ್ವಲ್ಪ ಹರಳೆಣ್ಣೆ ಮಿಶ್ರ ಮಾಡಿ, ನೋವಿರುವ ಜಾಗಕ್ಕೆ ತಿಕ್ಕಿದರೆ ನೋವು ಬಹಳ ಮಟ್ಟಿಗೆ ಕಡಿಮೆ ಆಗುತ್ತದೆ.
26. ಮಂಡಿ ನೋವು ಅಥವಾ ಬೆನ್ನು ನೋವಿದ್ದಾಗ ಕಷ್ಟಕರವಾದ ವ್ಯಾಯಾಮ, ಯೋಗಾಸನಗಳನ್ನು ಮಾಡಬಾರದು.
27. ವೈದ್ಯರ ಸಲಹೆ ಇಲ್ಲದೆ ಮಂಡಿ ನೋವಿರುವವರು ಏರೋಬಿಕ್ಸ್, ಯೋಗಾಸನ, ಜಿಮ್ ಮಾಡಬಾರದು.
28. ಸ್ವಲ್ಪ ವಾಕಿಂಗ್ ಮತ್ತು ಲಘು ವ್ಯಾಯಾಮ, ಶುದ್ಧವಾದ ವಾಯು ಸೇವನೆ, ಒಳ್ಳೆ ಆಹಾರ ಸೇವಿಸಿ, ರಾತ್ರಿ ಚೆನ್ನಾಗಿ ನಿದ್ದೆ ಮಾಡಬೇಕು. ಬೆಳಿಗ್ಗೆ ಏಳುವಾಗ ಉಲ್ಲಾಸದಾಯಕವಾಗಿ ಆಯಾಸವೆಲ್ಲ ಪರಿಹಾರವಾಗುತ್ತದೆ.
29. ರಾತ್ರಿ ಮಲಗುವ ಮುನ್ನ 10 ನಿಮಿಷ ಧ್ಯಾನ ಮಾಡಿದರೆ ಮನಸ್ಸಿಗೆ ಒಳ್ಳೆಯದು. ಚೆನ್ನಾಗಿ ನಿದ್ದೆ ಬರುತ್ತದೆ.
30. 200 ಗ್ರಾಂ ಮೆಂತ್ಯ, 50 ಗ್ರಾಂ ಕಾಳು ಮೆಣಸು, 50 ಗ್ರಾಂ ಓಂ ಕಾಳು (ಅಜವಾನ) ಎಲ್ಲವನ್ನೂ ಹುರಿದು ಪುಡಿ ಮಾಡಿಟ್ಟುಕೊಂಡು, ಪ್ರತಿದಿನ ರಾತ್ರಿ ಮಲಗುವ ಮುನ್ನ ಕಾಲು ಚಮಚ ಅಥವಾ 4 ಚಿಟಿಕೆ ಬಿಸಿ ನೀರಿನ ಜತೆ ಸೇವಿಸಬೇಕು. ಒಂದು ವಾರದ ನಂತರ ನಿಮಗೇ ಅದರ ಪರಿಣಾಮ ತಿಳಿಯುತ್ತದೆ.

ದೇಹಕ್ಕೆ ಮನಸ್ಸಿಗೆ ಆಯಾಸವಾದಾಗ ದೇವರ ಧ್ಯಾನ, ಒಳ್ಳೆಯ ಪುಸ್ತಕ ಓದುವುದು, ಒಳ್ಳೆಯ ಸಂಗೀತ ಕೇಳುವುದು – ಇದರಿಂದ ಉಲ್ಲಾಸ, ಉತ್ಸಾಹ ನೆಮ್ಮದಿ, ಸಂತೋಷ ಎಲ್ಲಾ ದೊರಕಿ ನೋವಿಲ್ಲದ ಬದುಕು ನಮ್ಮದಾಗುತ್ತದೆ.

■ ಗಾಯತ್ರಿ ಶೇಷಾಚಲ

ಅಕ್ಷರ ಮಾಲೆ

ಅ : ಅತಿ ಆಸೆ ಗತಿ ಕೆಡಿಸಿತು.
ಆ : ಆಸೆಯೇ ದುಃಖಕ್ಕೆ ಕಾರಣ.
ಇ : ಇಂಗು ತಿಂದ ಮಂಗನ ಹಾಗೆ ಆಡಬೇಡ.
ಈ : ಈಶನ ಧ್ಯಾನದಿಂದ ಮುಕ್ತಿಯನ್ನು ಹೊಂದು.
ಉ : ಉಪ್ಪು ತಿಂದ ಮನೆಗೆ ಎರಡು ಬಗೆಯಬೇಡ.
ಊ: ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
ಋ : ಋಷಿಗಳ ಶಾಪಕ್ಕೆ ಒಳಗಾಗಬೇಡ.
ಎ : ಎಷ್ಟೇ ಕಷ್ಟ ಬಂದರೂ ಸತ್ಯವನ್ನು ಬಿಡಬೇಡ.
ಏ : ಏಳಿಗೆಗೆ ಬರುವುದೇ ನಿನ್ನ ಮುಖ್ಯ ಗುರಿಯಾಗಿರಲಿ.
ಐ : ಐಶ್ವರ್ಯ ಬಂದಾಗ ಅಹಂಕಾರ ಪಡಬೇಡ.
ಒ : ಒಗ್ಗಟ್ಟಿನಲ್ಲಿ ಬಲವಿದೆ.
ಓ : ಓಬವ್ವಳಂತೆ ನೀನು ಆದರ್ಶ ಮಹಿಳೆಯಾಗು.
ಔ : ಔಷಧದಿಂದ ಆರೋಗ್ಯವನ್ನು ಹೊಂದು.
ಕ : ಕಷ್ಟ ಬಂದಾಗ ಕುಗ್ಗಬೇಡ, ಸುಖ ಬಂದಾಗ ಹಿಗ್ಗಬೇಡ.
ಖ : ಖಡ್ಗ ಹಿಡಿಯುವ ಕೈ ಮೇಲುಗೈಯಾಗಿರಲಿ.
ಗ : ಗಂಭೀರತೆಯನ್ನು ಚಿಕ್ಕ ವಯಸ್ಸಿನಿಂದಲೇ ಬೆಳೆಸಿಕೋ.
ಘ : ಘನತೆಯಿಂದ ನಿನ್ನ ಬಾಳನ್ನು ನಡೆಸು.
ಚ : ಚಮತ್ಕಾರದಿಂದ ಕಾರ್ಯ ಸಾಧಿಸು.
ಛ : ಛಲವೇ ನಿನ್ನ ಬಾಳಿನ ಗುರಿಯಾಗಿರಲಿ.
ಜ : ಜನ ಸೇವೆಯೇ ಜನಾರ್ಧನನ ಸೇವೆ.
ಝ: ಝಣಾ ಝಣಾ ಎಂದು ಜೇಬು ತುಂಬ ಹಣವಿದ್ದಾಗ ಮನಸ್ಸನ್ನು ಹಿಡಿತದಲ್ಲಿಡು.
ಟ : ಟಪಾಲು ನಿನ್ನದಾಗಿದ್ದರೆ ಮಾತ್ರ ಓದು, ಬೇರೆಯವರದನ್ನು ಓದಬೇಡ.
ಠ : ಠಕ್ಕರಿಗೆ ನೆರವಾಗಬೇಡ.
ಡ : ಡಂಭಾಚಾರದ ಬದುಕು ವ್ಯರ್ಥ.
ಢ : ಢಕ್ಕಾ ಮುಕ್ಕಿಯಾಗಿ ಗೆಳೆಯರೊಡನೆ ಕಾದಾಡಬೇಡ.
ತ : ತನ್ನನ್ನು ತಾನೇ ಹೊಗಳಿಕೊಳ್ಳಬೇಡ.
ಥ : ಥಳಥಳನೆ ವೈಯ್ಯಾರ ಮಾಡಬೇಡ.
ದ : ದಯೆಯೇ ಧರ್ಮದ ಮೂಲ.
ಧ : ಧನವಂತನೆಂದು ಹೆಮ್ಮೆ ಪಡಬೇಡ, ಅದು ಶಾಶ್ವತವಲ್ಲ.
ನ : ನಂಬಿದವರನ್ನು ಕೈ ಬಿಡಬೇಡ.
ಪ : ಪರರನ್ನು ನಿಂದಿಸಬೇಡ.
ಫ : ಫಲವನ್ನು ನೀಡಿ ಪುಣ್ಯ ಪಡೆ.
ಬ : ಬಡವನ ಕೋಪ ದವಡೆಗೆ ಮೂಲ.
ಭ : ಭಕ್ತಿಯಿಂದ ದೇವರನ್ನು ಧ್ಯಾನಿಸು.
ಮ : ಮನಸ್ಸು ನೋಯುವಂತೆ ಮಾತನಾಡಬೇಡ.
ಯ: ಯಶಸ್ಸಿನಷ್ಟು ದುಬಾರಿಯಾದುದು ಬೇರಾವುದೂ ಇಲ್ಲ.
ರ : ರಗಳೆ ಮಾಡಿ ಹಟ ಹಿಡಿಯಬೇಡ.
ಲ : ಲಕ್ಷಾಧಿಪತಿಯಾದರೂ ಬಡವರನ್ನು ಮರೆಯಬೇಡ.
ವ : ವರದಕ್ಷಿಣೆಗೆ ಕೈ ಚಾಚಬೇಡ.
ಶ : ಶತ್ರುಗಳನ್ನು ಕ್ಷಮಿಸು.
ಷ : ಷರಾಬು ಕುಡಿಯುವುದನ್ನು ಅಭ್ಯಾಸ ಮಾಡಬೇಡ.
ಸ : ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ.
ಹ : ಹಸಿವಿನಿಂದ ಬಂದವರನ್ನು ಸಂತೈಸು.
ಕ್ಷ : ಕ್ಷತ್ರಿಯನಂತೆ ದೇಶಕ್ಕಾಗಿ ಹೋರಾಡು.

■ ಎಸ್. ಇಂದಿರಾ ಪ್ರಕಾಶ್

ಕಟ್ಟು ನಲ್ಮೆ ನಾಡನು

ಪುಟ್ಟ ಹೆಜ್ಜೆಯಾದರೇನು
ದಿಟ್ಟ ಹೆಜ್ಜೆ ಇಟ್ಟು ಸಾಗು
ಅಟ್ಟು ಎಲ್ಲಾ ಕೆಟ್ಟ ಗುಣವ
ಕಟ್ಟು ನಲ್ಮೆ ನಾಡನು ‖ ೧ ‖

ತೊಟ್ಟು ಪಣವ ಧೀರನಾಗಿ
ಇಟ್ಟು ಮನವ ದೇವನಲ್ಲಿ
ಮೆಟ್ಟಿ ನಿಲ್ಲು ಭಯಗಳನ್ನು
ದಿಟ್ಟನಾಗಿ ಗೆಳೆಯನೆ ‖ ೨ ‖

ಬೆಟ್ಟದಂಥ ಕಷ್ಟಗಳನು
ಮಟ್ಟ ಹಾಕು ಪೆಟ್ಟುಗಳನು
ಗಟ್ಟಿ ಮನಸು ಮಾಡಿ ನೀನು
ಜಟ್ಟಿಯಂತೆ ಎದುರಿಸು ‖ ೩ ‖

ಮುಟ್ಟು ನಿನ್ನ ಗುರಿಗಳನ್ನು
ಅಟ್ಟಾಚೆಗೆ ಆಲಸ್ಯವನು
ಪಟ್ಟು ಹಿಡಿದು ಹೋರಾಡು
ಕಟ್ಟ ಕಡೆ ಜಯದವರೆಗೂ

■ ಶುಭ ಗಾಯತ್ರಿ

ಗೊರಕೆ

ನನ್ನಾಕೆ ಹೊಡೆಯುತ್ತಾಳೆ
ನನ್ನಾಕೆ ವಿಪರೀತ ಹೊಡೆಯುತ್ತಾಳೆ
ನನ್ನಾಕೆ ವಿಪರೀತ ಹೊಡೆಯುತ್ತಾಳೆ, ಗೊರಕೆ

ನಿಲ್ಲಿಸಲೆಂದು ಅವಳು ಗೊರಕೆ
ತಂದುಕೊಟ್ಟೆ ಹೊಸ ಸೀರೆ ರವಿಕೆ
ನಿಲ್ಲಲಿಲ್ಲ ಅವಳ ಗೊರಕೆ ‖

ನಿಲ್ಲಿಸಲೆಂದು ಅವಳು ಗೊರಕೆ
ದೇವರಲ್ಲಿ ಹೊತ್ತುಕೊಂಡೆ ಹರಕೆ
ನಿಲ್ಲಿಸಲಿಲ್ಲ ಅವಳು ಗೊರಕೆ

ನಿಲ್ಲಿಸಲಿಲ್ಲ ಅವಳು ಗೊರಕೆ
ಕೈಗೆ ಎತ್ತಿಕೊಂಡೆ ಪೊರಕೆ
ನಿಲ್ಲಿಸಲಿಲ್ಲ ಅವಳು ಗೊರಕೆ

ಕೇಳಿಸಕೊಡದೆಂದು ಅವಳ ಗೊರಕೆ
ನಾನೇ ನಡೆದೆ ಮನೆಯಿಂದ ಹೊರಕೆ
ಈಗ ಕೇಳಿಸುತ್ತಿಲ್ಲ ಅವಳ ಗೊರಕೆ

■ ಎಚ್.ಪಿ. ರಾಮಕೃಷ್ಣ

ನೆನಪಿನಾಳದಿಂದ ಛಾಯಾಚಿತ್ರ – 5 ಮತ್ತು 6



ವಿಲ್ಸನ್‌ಗಾರ್ಡನ್ ರಾಮಯ್ಯ ಅವರ ಕುಟುಂಬದವರ ಛಾಯಾಚಿತ್ರ (1970)



ರಾಜಾಪುರ ಶ್ರೀನಿವಾಸಮೂರ್ತಿಯವರ ಕುಟುಂಬದವರ ಛಾಯಾಚಿತ್ರ (1965)

ಅಭಿನಂದನೆ

ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾಗಿ ಚುನಾಯಿತರಾದ ಶ್ರೀ ಕಟ್ಟೆ ಸತ್ಯನಾರಾಯಣರಿಗೆ ಬೃಹಚ್ಚರಣ ಸಂಘವು ಅಭಿನಂದಿಸುತ್ತದೆ. ಸಂಘದೊಂದಿಗೆ ನಿಕಟ ಸಂಬಂಧವಿರುವ ಶ್ರೀ ಸತ್ಯನಾರಾಯಣರವರಿಗೆ ಶುಭ ಕೋರುತ್ತಾ ಅವರು ತೆಗೆದುಕೊಳ್ಳುವ ಸಾಮಾಜಿಕ ಕಳಕಳಿಯ ತೀರ್ಮಾನಗಳಿಗೆ ಬೆಂಬಲ ನೀಡಲು ಕಾರ್ಯಕಾರಿ ಸಮಿತಿ ತೀರ್ಮಾನಿಸಿ ಅವರ ಕುಟುಂಬಕ್ಕೂ 'ಬೃಹಚ್ಚರಣ' ಸಂಘವು ಶುಭ ಹಾರೈಸುತ್ತದೆ.

ನಮ್ಮವರ ಪುಸ್ತಕಗಳು

ಶ್ರೀ ಎಂ.ಎಸ್. ಪ್ರಭಾಕರ ಅವರ **"ಸಮಗ್ರ ಕಾಮರೂಪಿ"** ಕಥೆ, ಕಾದಂಬರಿ, ಕವಿತೆ ಬ್ಲಾಗ್ ಬರಹಗಳ ಸಮಗ್ರ ಸಂಪುಟ ಪುಸ್ತಕವನ್ನು 28–5–2013ರಂದು ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ಬಿಡುಗಡೆಯಾಯಿತು. ಹಿರಿಯ ಲೇಖಕರಿಗೆ **ಬೃಹಚ್ಚರಣ** ಶುಭ ಹಾರೈಸುತ್ತದೆ.

ಶ್ರೀ ಅಶ್ವಿನಿ ರಂಗನ್‌ರವರು 'Perecharana Pillers' 'ಪರಿಚರಣ ಪಿಲ್ಲರ್ಸ್' Stroes of Kittaganahalli Kith & Kin ಎಂಬ ಪುಸ್ತಕವನ್ನು ಹೊರ ತಂದಿರುತ್ತಾರೆ. ಲೇಖಕರಿಗೆ ಸಂಘ ಶುಭ ಹಾರೈಸುತ್ತದೆ.

ಅಭಿನಂದನೆ

ಶ್ರೀ ಎನ್.ಎಸ್. ಪ್ರಭುರವರು ತಮ್ಮ ತಾಯಿ ಶ್ರೀಮತಿ ಸುಬ್ಬಮ್ಮನವರ ನೆನಪಿನಲ್ಲಿ "ಶಾಶ್ವತ ಅನ್ನಸಂತರ್ಪಣಾ ನಿಧಿ"ಗೆ ಹತ್ತು ಸಾವಿರ ರೂಪಾಯಿ ದೇಣಿಗೆ ನೀಡಿರುತ್ತಾರೆ. ಬೃಹಚ್ಚರಣ ಸಂಘವು ಶ್ರೀ ಪ್ರಭು ಹಾಗೂ ಅವರ ಕುಟುಂಬದ ಸದಸ್ಯರಿಗೆ ಶುಭ ಕೋರುತ್ತದೆ.

ಓದುಗರ ಪತ್ರಗಳು





ಶ್ರದ್ಧಾಂಜಲಿ

ಕು. ಅಚಲ ರಮೇಶ್

"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯೆ **ಕುಮಾರಿ ಅಚಲ ರಮೇಶ್** (22) 19–9–2013ರಂದು ಇಹಲೋಕ ತ್ಯಜಿಸಿದರು ಎಂದು ವಿಷಾದದಿಂದ ತಿಳಿಸಬೇಕಿದೆ. **ಶ್ರೀಮತಿ ಲಲಿತ– ಶ್ರೀ ರಮೇಶ**ರವರ ಏಕೈಕ, ಇಂಜಿನಿಯರಿಂಗ್ ಪದವೀಧರೆ ಪುತ್ರಿ ನಮ್ಮ ಸಂಘದ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಮುಂಚೂಣಿಯಲ್ಲಿರುತ್ತಿದ್ದು, ನಮ್ಮ ಸಂಚಿಕೆಗೆ ಉತ್ತಮ ಲೇಖನಗಳನ್ನು ಬರೆಯುತ್ತಿದ್ದರು.

ಅಕಾಲಿಕ–ಅಗಲಿಕೆಯಿಂದ ಅವರ ಕುಟುಂಬವಷ್ಟೇ ಅಲ್ಲದೆ ಸಂಘದ ಸದಸ್ಯರಿಗೂ ಆಘಾತವಾಗಿದೆ. ಶ್ರೀ ರಮೇಶ್ ಹಾಗೂ ಕುಟುಂಬ ಸದಸ್ಯರ ನೋವಿನಲ್ಲಿ ನಾವೂ ಭಾಗಿಗಳು, ಅವರ ಕುಟುಂಬಕ್ಕೆ ಸಾಂತ್ವನ ಹೇಳಿ ಶಾಂತಿ ನೆಮ್ಮದಿ ಕೊಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

Book-Post

To, ______________________

____

____

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026.